रेलवे भर्ती बोर्ड / RAILWAY RECRUITMENT BOARDS
सीईएन - 04/2026 - जेई, डीएमएस, सीएमए - CEN - 04/2026 - JE, DMS, CMA

Test Date	28/10/2026
Test Time	4:30 PM - 6:00 PM
Subject / Exam Group	RRB JE DMS CMA CBT I

*** Note**
Correct Answer will carry 1 mark per Question.
Incorrect Answer will carry 1/3 Negative mark per Question.

1. Options shown in green color with a tick icon are correct.
2. Chosen option on the right of the question indicates the option selected by the candidate.

Section : **RRB JE DMS CMA CBT I**

Q.1 ಮಹಾತ್ಮ ಗಾಂಧಿ ನೇತೃತ್ವದ ಸ್ವಾತಂತ್ರ್ಯ ಚಳವಳಿಯ ಹಂತದಲ್ಲಿ, 1922 ರ ಫೆಬ್ರುವರಿಯಲ್ಲಿ ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಳ್ಳಲು ಕಾರಣವಾದ ಘಟನೆ ಯಾವುದು?

Ans
- ✔ 1. ಚೌರಿ ಚೌರಾ ಘಟನೆ
- ✘ 2. ಸೈಮನ್ ಆಯೋಗದ ಆಗಮನ
- ✘ 3. ದಂಡಿಯ ಉಪ್ಪಿನ ಮೆರವಣಿಗೆ
- ✘ 4. ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ

Q.2 15 km ಓಟದ ಸ್ಪರ್ಧೆಯಲ್ಲಿ, ಓಟಗಾರ A ಮತ್ತು ಓಟಗಾರ B ಒಂದೇ ಬಿಂದುವಿನಿಂದ ಏಕಕಾಲದಲ್ಲಿ ಒಂದೇ ದಿಕ್ಕಿನಲ್ಲಿ ಓಡಲು ಪ್ರಾರಂಭಿಸುತ್ತಾರೆ. 6 km ಓಡಿದ ನಂತರ, ಶೂ ಸಮಸ್ಯೆಯ ಕಾರಣದಿಂದಾಗಿ A ಯು 3 ನಿಮಿಷಗಳ ಕಾಲ ನಿಲ್ಲುತ್ತಾನೆ, ಆದರೆ B ಯು ನಿಲ್ಲದೆ ಓಡುವುದನ್ನು ಮುಂದುವರಿಸುತ್ತಾನೆ. ಈ ವಿಳಂಬದ ಹೊರತಾಗಿಯೂ, A ಯು ಓಟವನ್ನು B ಗಿಂತ 90 ಸೆಕೆಂಡುಗಳ ಮುಂಚಿತವಾಗಿ ಪೂರ್ಣಗೊಳಿಸುತ್ತಾನೆ. ಇದಕ್ಕೆ ಬದಲಾಗಿ, A ಯು B ಗೆ 1,200 ಮೀಟರ್‌ಗಳ ಪ್ರಾರಂಭಾನುಕೂಲವನ್ನು (head start) ನೀಡಿ, ಇಬ್ಬರೂ ಓಟಗಾರರು ನಿಲ್ಲದೆ ಓಡಿದರೆ, ಆಗಲೂ A ಯು 40 ಸೆಕೆಂಡುಗಳ ಮುಂಚಿತವಾಗಿ ಓಟವನ್ನು ಮುಗಿಸುತ್ತಾನೆ. ಇಬ್ಬರೂ ಓಟಗಾರರು ಯಾವಾಗಲೂ ಸ್ಥಿರ ವೇಗದಲ್ಲಿ ಓಡುತ್ತಾರೆ ಎಂದು ಭಾವಿಸಿದರೆ, ಇಬ್ಬರೂ ಓಟವನ್ನು ಏಕಕಾಲದಲ್ಲಿ ಕೊನೆಗೊಳಿಸಲು A ಯು B ಗೆ ನೀಡಬೇಕಾದ ಕನಿಷ್ಠ ಪ್ರಾರಂಭಾನುಕೂಲ (ಮೀಟರ್ ಗಳಲ್ಲಿ) (ಹತ್ತಿರದ ಪೂರ್ಣಾಂಕಕ್ಕೆ ಸೀಮಿತಗೊಳಿಸಿ) ಎಷ್ಟು?

Ans
- ✔ 1. 1409 m
- ✘ 2. 1405 m
- ✘ 3. 1404 m
- ✘ 4. 1490 m

Q.3 ಎಲ್ಲಾ 99 ಜನರು ಒಂದು ಸಾಲಿನಲ್ಲಿ ಉತ್ತರದ ಕಡೆಗೆ ಮುಖಮಾಡಿ ನಿಂತಿದ್ದಾರೆ. ಶ್ರೀ ಸೋನು ಅವರು ಎಡ ತುದಿಯಿಂದ 6ನೇ ಸ್ಥಾನದಲ್ಲಿದ್ದರೆ, ಶ್ರೀ ಪಿಕ್ ಅವರು ಬಲ ತುದಿಯಿಂದ 67ನೇ ಸ್ಥಾನದಲ್ಲಿದ್ದಾರೆ. ಹಾಗಾದರೆ, ಶ್ರೀ ಸೋನು ಮತ್ತು ಶ್ರೀ ಪಿಕ್ ಅವರ ನಡುವೆ ಎಷ್ಟು ಜನರಿದ್ದಾರೆ?

Ans
- ✔ 1. 26
- ✘ 2. 29
- ✘ 3. 27
- ✘ 4. 23

Q.4 ಒಂದು ಮಾಧ್ಯಮದ ತಾಪಮಾನವನ್ನು ಹೆಚ್ಚಿಸಿದಾಗ ಶಬ್ದದ ವೇಗಕ್ಕೆ ಏನಾಗುತ್ತದೆ?

Ans
- ✘ 1. ಅದು ಮೊದಲು ಕಡಿಮೆಯಾಗುತ್ತದೆ, ನಂತರ ಹೆಚ್ಚಾಗುತ್ತದೆ
- ✔ 2. ಅದು ಹೆಚ್ಚಾಗುತ್ತದೆ
- ✘ 3. ಅದು ಕಡಿಮೆಯಾಗುತ್ತದೆ
- ✘ 4. ಅದು ಹಾಗೆಯೇ ಉಳಿಯುತ್ತದೆ

Q.5 ಈ ಕೆಳಗಿನ ಸಂಖ್ಯೆ, ಚಿಹ್ನೆಗಳ ಸರಣಿಯನ್ನು ಗಮನಿಸಿ ಮತ್ತು ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು. ಎಲ್ಲಾ ಸಂಖ್ಯೆಗಳು ಒಂದಂಕಿಯ ಸಂಖ್ಯೆಗಳಾಗಿವೆ.

(ಎಡ) 4 Ω 2 & 8 * 1 @ 7 $ 3 % 5 £ 9 & 6 # 2 (ಬಲ)

ಪ್ರತಿಯೊಂದೂ ತನ್ನ ತಕ್ಷಣದ ಹಿಂದೆ ಬೆಸ ಸಂಖ್ಯೆಯನ್ನು ಹೊಂದಿರುವ, ಆದರೆ ತನ್ನ ತಕ್ಷಣದ ಮುಂದೆ ಬೆಸ ಸಂಖ್ಯೆಯನ್ನು ಹೊಂದಿರದ ಎಷ್ಟು ಚಿಹ್ನೆಗಳು ಈ ಸರಣಿಯಲ್ಲಿವೆ?

Ans
✗ 1. ಮೂರು
✓ 2. ಒಂದು
✗ 3. ಯಾವುದೂ ಇಲ್ಲ
✗ 4. ಎರಡು

Q.6 $6\sqrt{2}$ cm ತ್ರಿಜ್ಯವುಳ್ಳ ಒಂದು ಗೋಳದ ಘನಫಲವನ್ನು ಕಂಡುಹಿಡಿಯಿರಿ.

Ans
✓ 1. $576\sqrt{2}\pi$ cm^3
✗ 2. $572\sqrt{2}\pi$ cm^3
✗ 3. $574\sqrt{2}\pi$ cm^3
✗ 4. $578\sqrt{2}\pi$ cm^3

Q.7 ಯಾವ ಗುಣಲಕ್ಷಣದ ಬದಲಾವಣೆಯಿಂದಾಗಿ ಲಿಟ್ಮಸ್ ದ್ರಾವಣವು ಒಂದು ಜಲೀಯ ದ್ರಾವಣವು ಆಮ್ಲೀಯವೇ ಅಥವಾ ಪ್ರತ್ಯಾಮ್ಲೀಯವೇ ಎಂಬುದನ್ನು ಗುರುತಿಸಲು ಸಹಾಯ ಮಾಡುತ್ತದೆ?

Ans
✗ 1. ಸೂಚಕ ಕ್ರಿಯೆಯ ವೇಳೆ ತಾಪಮಾನದಲ್ಲಿ ವ್ಯತ್ಯಯವು ಉಂಟಾಗುತ್ತದೆ
✓ 2. ಬಣ್ಣವು ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ದ್ರಾವಣಗಳಲ್ಲಿ ವಿಭಿನ್ನವಾಗಿ ಬದಲಾಗುತ್ತದೆ
✗ 3. ವಿದ್ಯುತ್ ವಾಹಕತೆಯು ಕೇವಲ ಆಮ್ಲೀಯ ದ್ರಾವಣಗಳಲ್ಲಿ ಹೆಚ್ಚಾಗುತ್ತದೆ
✗ 4. ಅನಿಲದ ವಿಕಸನವು ಆಮ್ಲೀಯ ಅಥವಾ ಪ್ರತ್ಯಾಮ್ಲೀಯ ಗುಣವನ್ನು ದೃಢೀಕರಿಸುತ್ತದೆ

Q.8 ಆಂಗ್ಲ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಕೊಟ್ಟಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವುದು ಸರಿ ಹೊಂದುತ್ತದೆ?

UMP TLO SKN RJM ?

Ans
✗ 1. QJL
✗ 2. QJK
✗ 3. QIK
✓ 4. QIL

Q.9 9 ಫೆಬ್ರುವರಿ 2024ರಂದು ಠೇವಣಿ ಇಡಲಾದ ಮತ್ತು 10 ಏಪ್ರಿಲ್ 2024ರಂದು ಹಿಂಪಡೆಯಲಾದ ₹6,000 ಮೊತ್ತದ ಮೇಲೆ ವಾರ್ಷಿಕ 5% ದರದಲ್ಲಿ ದೊರೆಯುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ. ಬಡ್ಡಿಯನ್ನು ಲೆಕ್ಕ ಹಾಕುವುದಕ್ಕಾಗಿ, ಠೇವಣಿ ಮಾಡಲಾದ ದಿನಾಂಕವನ್ನು ಸೇರಿಸದೆ, ಠೇವಣಿ ಹಿಂಪಡೆದ ದಿನವನ್ನು ಸೇರಿಸಿ ಹಾಗೂ 2024ರ ಅಧಿಕ ವರ್ಷದಲ್ಲಿ ಬರುವ ನೈಜ ದಿನಗಳ ಸಂಖ್ಯೆಯನ್ನು ಬಳಸಿ.

Ans
✗ 1. 48
✗ 2. 49
✓ 3. 50
✗ 4. 51

Q.10 ದ್ವಿಸ್ಥಾನಪಲ್ಲಟ ಕ್ರಿಯೆಯು _____ ಒಳಗೊಂಡಿರುತ್ತದೆ.

Ans
✗ 1. ಪದಾರ್ಥಗಳಿಂದ ಆಮ್ಲಜನಕದ ನಷ್ಟ
✓ 2. ಕ್ರಿಯಾಕಾರಕಗಳ ನಡುವೆ ಅಯಾನುಗಳ ವಿನಿಮಯ
✗ 3. ಕೇವಲ ಒಂದೇ ರೀತಿಯ ಪರಮಾಣುಗಳ ಸಂಯೋಜನೆ
✗ 4. ಒಂದೇ ಹೊಸ ಸಂಯುಕ್ತದ ರಚನೆ

blackbook

Q.11 ಸ್ನಾಯುಗಳು ಕಾರ್ಯನಿರ್ವಹಿಸಲು ನರ ಅಂಗಾಂಶವು ಏಕೆ ಅಗತ್ಯವಿದೆ ಎಂಬುದನ್ನು ಈ ಕೆಳಗಿನವುಗಳಲ್ಲಿ ಯಾವುದು ವಿವರಿಸುತ್ತದೆ?

Ans
✔ 1. ಸ್ನಾಯುಗಳು ನರಗಳಿಂದ ಸಂಕೇತಗಳನ್ನು ಪಡೆಯುತ್ತವೆ
✘ 2. ಸ್ನಾಯುಗಳು ಮೆದುಳಿನ ಚಟುವಟಿಕೆಯನ್ನು ನಿಯಂತ್ರಿಸುತ್ತವೆ
✘ 3. ಸ್ನಾಯುಗಳು ತಮ್ಮದೇ ಆದ ಸಂಕೇತಗಳನ್ನು ಉತ್ಪಾದಿಸುತ್ತವೆ
✘ 4. ಸ್ನಾಯುಗಳು ಪ್ರತಿಕ್ರಿಯೆಗಳನ್ನು ಒಂಟಿಯಾಗಿ ಸಮನ್ವಯಗೊಳಿಸುತ್ತವೆ

Q.12 ₹10,000 ಅಸಲು ಮೊತ್ತವನ್ನು, ತಿಂಗಳಿಗೊಮ್ಮೆ ಚಕ್ರ ಬಡ್ಡಿಯನ್ನು ಲೆಕ್ಕ ಹಾಕುವಂತೆ, ವಾರ್ಷಿಕ 12% ಬಡ್ಡಿಯ ದರದಲ್ಲಿ 3 ತಿಂಗಳ ಅವಧಿಯವರೆಗೆ ಹೂಡಿಕೆ ಮಾಡಲಾಗಿದೆ. ಹಾಗಾದರೆ ಈ ಅವಧಿಯಲ್ಲಿ ಗಳಿಸಿದ ಚಕ್ರಬಡ್ಡಿ ಮತ್ತು ಸರಳಬಡ್ಡಿಗಳ ನಡುವಿನ ವ್ಯತ್ಯಾಸ ಎಷ್ಟು? (ಸಮೀಪದ ಪೂರ್ಣಾಂಕಕ್ಕೆ ತರಲಾಗಿದೆ)

Ans
✘ 1. ₹12
✘ 2. ₹30
✔ 3. ₹3
✘ 4. ₹0

Q.13 ಒಂದು ನಿರ್ದಿಷ್ಟ ಸಂಕೇತದಲ್ಲಿ,
'rose lily lotus' ಎಂಬುದನ್ನು 'rt ka mn' ಎಂದು ಸಂಕೇತಿಸಲಾಗಿದೆ,
'lotus jasmine tulip' ಎಂಬುದನ್ನು 'pq dx rt' ಎಂದು ಸಂಕೇತಿಸಲಾಗಿದೆ ಮತ್ತು
'tulip rose orchid' ಎಂಬುದನ್ನು 'ka yz dx' ಎಂದು ಸಂಕೇತಿಸಲಾಗಿದೆ,
(ಎಲ್ಲ ಸಂಕೇತಗಳು ಕೇವಲ ಎರಡಕ್ಷರದ ಸಂಕೇತಗಳಾಗಿವೆ.)

ಹಾಗಾದರೆ orchid ನ ಸಂಕೇತವೇನು?

Ans
✘ 1. dx
✔ 2. yz
✘ 3. pq
✘ 4. ka

Q.14 2027 ರಲ್ಲಿ ನಡೆಯಬೇಕಿರುವ ಜನಗಣತಿಯು ಭಾರತೀಯ ಜನಗಣತಿಯ ಅನುಕ್ರಮದಲ್ಲಿ ಈ ಕೆಳಗಿನವುಗಳಲ್ಲಿ ಯಾವುದೆನಿಸಲಿದೆ?

Ans
✘ 1. ಭಾರತದ 15ನೇ ಜನಗಣತಿ
✘ 2. ಭಾರತದ 17ನೇ ಜನಗಣತಿ
✔ 3. ಭಾರತದ 16ನೇ ಜನಗಣತಿ
✘ 4. ಭಾರತದ 14ನೇ ಜನಗಣತಿ

Q.15 ಒಂದು ಸಂಖ್ಯೆಯ 40% ಮೊತ್ತವನ್ನು 120 ಕ್ಕೆ ಕೂಡಿಸಿದರೆ, ಸಿಗುವ ಲಬ್ಧವು ಅದೇ ಸಂಖ್ಯೆಯಾಗಿರುತ್ತದೆ. ಹಾಗಾದರೆ ಅದೇ ಸಂಖ್ಯೆಯ 60% ಮೊತ್ತ ಎಷ್ಟು?

Ans
✘ 1. 160
✘ 2. 100
✔ 3. 120
✘ 4. 140

Q.16 14 cm ಬಾಹುವಿನ ಘನವನ್ನು ಅಂಚುಗಳ ಮಧ್ಯಬಿಂದುಗಳ ಮೂಲಕ ಹಾದುಹೋಗುವ ಸಮತಲಗಳಿಂದ ಸರ್ವಸಮವಾಗಿರುವ 8 ಸಣ್ಣಸಣ್ಣ ಘನಗಳಾಗಿ ಕತ್ತರಿಸಲಾಗಿದೆ. ಎಲ್ಲಾ 8 ಸಣ್ಣ ಘನಗಳ ಒಟ್ಟು ಮೇಲ್ಮೈ ವಿಸ್ತೀರ್ಣವನ್ನು (cm^2 ಗಳಲ್ಲಿ) ಕಂಡುಹಿಡಿಯಿರಿ.

Ans
✔ 1. 2352
✘ 2. 2312
✘ 3. 2388
✘ 4. 2342

Q.17 ಇದರ ಮೌಲ್ಯವನ್ನು ಕಂಡುಹಿಡಿಯಿರಿ $3[\sin^4 A - \cos^4 A + 1]\text{cosec}^2 A + 2$

Ans
✘ 1. 3
✘ 2. 0
✘ 3. 5
✔ 4. 8

Black book

Q.18 ಕ್ರಮವಾಗಿ 6 cm, 8 cm ಮತ್ತು 10 cm ತ್ರಿಜ್ಯಗಳನ್ನು ಹೊಂದಿರುವ ಲೋಹದ ಗೋಳಗಳನ್ನು ಕರಗಿಸಿ ಒಂದೇ ಘನ ಗೋಳವನ್ನಾಗಿ ಮರುರೂಪಿಸಲಾಗಿದೆ. ರೂಪುಗೊಂಡ ಗೋಳದ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

Ans
✗ 1. $605\pi\ cm^2$
✓ 2. $576\pi\ cm^2$
✗ 3. $548\pi\ cm^2$
✗ 4. $586\pi\ cm^2$

Q.19 ಒಂದುವೇಳೆ 'A' ಎಂದರೆ '÷', 'B' ಎಂದರೆ 'x', 'C' ಎಂದರೆ '+' ಮತ್ತು 'D' ಎಂದರೆ '-' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಆಯ್ಕೆಯು ಸರಿಹೊಂದುತ್ತದೆ?

77 A 11 C 17 B 13 D 72 =?

Ans
✗ 1. 174
✓ 2. 156
✗ 3. 168
✗ 4. 160

Q.20 R, S, T, U, G, H, ಮತ್ತು I ಅವರು ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮೇಜಿನ ಮಧ್ಯಭಾಗಕ್ಕೆ ಮುಖ ಮಾಡಿ ಕುಳಿತಿದ್ದಾರೆ.
G ಅವರು U ನ ತಕ್ಷಣದ ಬಲಕ್ಕೆ ಕುಳಿತಿದ್ದಾರೆ. G ಅವರ ಎಡದಿಂದ ಎಣಿಸಿದಾಗ G ಮತ್ತು R ನಡುವೆ ಕೇವಲ ಮೂವರು ಕುಳಿತಿದ್ದಾರೆ. I ನ ಬಲಭಾಗದಿಂದ ಎಣಿಸಿದಾಗ U ಮತ್ತು I ನಡುವೆ ಕೇವಲ ಮೂವರು ಕುಳಿತಿದ್ದಾರೆ. S ಅವರು H ನ ತಕ್ಷಣದ ಬಲಕ್ಕೆ ಕುಳಿತಿದ್ದಾರೆ.
ಹಾಗಾದರೆ, H ನ ಬಲದಿಂದ ಎಣಿಸಿದಾಗ U ಮತ್ತು H ನಡುವೆ ಎಷ್ಟು ಜನರು ಕುಳಿತಿದ್ದಾರೆ?

Ans
✓ 1. ಒಬ್ಬರು
✗ 2. ಮೂವರು
✗ 3. ನಾಲ್ವರು
✗ 4. ಇಬ್ಬರು

Q.21 B, C, V, W, Y, ಮತ್ತು Z ಎಂಬವರದಲ್ಲಿ ಪ್ರತಿಯೊಬ್ಬರೂ ಬೇರೆ ಬೇರೆ ಅಂಕಗಳನ್ನು ಗಳಿಸಿದ್ದಾರೆ. ಕೇವಲ ಎರಡು ಜನರು Y ಗಿಂತ ಕಡಿಮೆ ಅಂಕಗಳನ್ನು ಗಳಿಸಿದ್ದಾರೆ. C ಯು B ಗಿಂತ ತಕ್ಷಣದ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. B ಮತ್ತು W ನಡುವೆ ಕೇವಲ ಎರಡು ಜನರು ಅಂಕಗಳನ್ನು ಗಳಿಸಿದ್ದಾರೆ. Z ಅವರು V ಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಯಾರೂ ಸಹ W ಗಿಂತ ಕಡಿಮೆ ಅಂಕಗಳನ್ನು ಗಳಿಸಿಲ್ಲ. ಹಾಗಾದರೆ ಎಷ್ಟು ಜನರು V ಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ?

Ans
✗ 1. ಎರಡು
✓ 2. ನಾಲ್ಕು
✗ 3. ಮೂರು
✗ 4. ಒಂದು

Q.22 M, N, O, X, Y ಮತ್ತು Z ಎಂಬವರು ಒಂದೇ ಕಟ್ಟಡದ ಆರು ಬೇರೆ ಬೇರೆ ಮಹಡಿಗಳಲ್ಲಿ ವಾಸಿಸುತ್ತಿದ್ದಾರೆ. ಅತ್ಯಂತ ಕೆಳಗಿನ ಮಹಡಿಯನ್ನು ಸಂಖ್ಯೆ 1ರಿಂದ ಗುರುತಿಸಿದರೆ, ಅದರ ಮೇಲಿನ ಮಹಡಿಯನ್ನು ಸಂಖ್ಯೆ 2ರಿಂದ ಗುರುತಿಸಲಾಗಿದೆ. ಹೀಗೆಯೇ ಮುಂದುವರಿದು ಅತ್ಯಂತ ಮೇಲಿನ ಮಹಡಿಯನ್ನು ಸಂಖ್ಯೆ 6ರಿಂದ ಗುರುತಿಸಲಾಗಿದೆ.
Y ಮತ್ತು O ನಡುವೆ ಕೇವಲ ಇಬ್ಬರು ವಾಸಿಸುತ್ತಿದ್ದಾರೆ. ಕೇವಲ N ಅವರು X ಅವರ ಮೇಲೆ ವಾಸಿಸುತ್ತಿದ್ದಾರೆ. M ಅವರು ಸಮ ಸಂಖ್ಯೆಯ ಮಹಡಿಯಲ್ಲಿ ವಾಸಿಸುತ್ತಿದ್ದಾರೆ. Y ಅವರು ಅತ್ಯಂತ ಕೆಳಗಿನ ಮಹಡಿಯಲ್ಲಿ ವಾಸಿಸುತ್ತಿದ್ದಾರೆ.
ಹಾಗಾದರೆ Z ಮತ್ತು N ನಡುವೆ ಎಷ್ಟು ಜನರು ವಾಸಿಸುತ್ತಿದ್ದಾರೆ?

Ans
✗ 1. ಮೂರು
✗ 2. ನಾಲ್ಕು
✓ 3. ಎರಡು
✗ 4. ಒಂದು

Black book

Q.23 ತೊಟ್ಟಿಯನ್ನು ಒಂದು ಕೊಳವೆಯಿಂದ 24 ನಿಮಿಷಗಳಲ್ಲಿ ತುಂಬಬಹುದು. ಇನ್ನೊಂದು ಕೊಳವೆಯು ಸಂಪೂರ್ಣವಾಗಿ ತುಂಬಿರುವ ಆ ತೊಟ್ಟಿಯನ್ನು 27 ನಿಮಿಷಗಳಲ್ಲಿ ಖಾಲಿ ಮಾಡಬಹುದು. ಒಂದು ವೇಳೆ ಆ ತೊಟ್ಟಿಯು ಖಾಲಿಯಾಗಿದ್ದಾಗ ಎರಡೂ ಕೊಳವೆಗಳನ್ನು ಏಕಕಾಲಕ್ಕೆ ತೆರೆದರೆ, ಆ ತೊಟ್ಟಿಯ ನಾಲ್ಕನೇ ಮೂರು ಭಾಗವನ್ನು ತುಂಬಿಸಲು ಎಷ್ಟು ನಿಮಿಷಗಳು ಬೇಕಾಗುತ್ತವೆ?

Ans
- ✗ 1. 171
- ✗ 2. 153
- ✗ 3. 144
- ✓ 4. 162

Q.24 7 ರಿಂದ ಭಾಗಿಸಿದಾಗ 6 ಶೇಷವನ್ನು ಉಳಿಸುವ ಮೊದಲ ಹತ್ತು ಸ್ವಾಭಾವಿಕ ಸಂಖ್ಯೆಗಳ (10 ಕ್ಕಿಂತ ಹೆಚ್ಚು) ಸರಾಸರಿಯನ್ನು ಕಂಡುಹಿಡಿಯಿರಿ.

Ans
- ✓ 1. 44.5
- ✗ 2. 28.6
- ✗ 3. 33.7
- ✗ 4. 52.4

Q.25 ಅಂಡಾಣುವು ಫಲೀಕರಣಗೊಳ್ಳದಿದ್ದರೆ ಮಾನವ ಸ್ತ್ರೀಯರ ಗರ್ಭಾಶಯದ ಒಳಪೊರೆಗೆ ಏನಾಗುತ್ತದೆ?

Ans
- ✗ 1. ಇದು ಯುಗ್ಮಜವಾಗಿ ಬದಲಾಗುತ್ತದೆ
- ✗ 2. ಇದು ರಕ್ತದಲ್ಲಿ ಹೀರಲ್ಪಡುತ್ತದೆ
- ✗ 3. ಇದು ಗರ್ಭಾಶಯದಲ್ಲಿ ದಪ್ಪವಾಗಿ ಉಳಿದುಕೊಳ್ಳುತ್ತದೆ
- ✓ 4. ಇದು ಕಳಚುತ್ತದೆ ಮತ್ತು ದೇಹವನ್ನು ಬಿಟ್ಟುಹೋಗುತ್ತದೆ

Q.26 ನರಕೋಶದ ಮೂಲಕ ವಿದ್ಯುತ್ ಪ್ರಚೋದನೆಯ ಪಥವನ್ನು ಯಾವ ಅನುಕ್ರಮವು ಸರಿಯಾಗಿ ವಿವರಿಸುತ್ತದೆ?

Ans
- ✗ 1. ಕೋಶಕಾಯದಿಂದ ಡೆಂಡ್ರೈಟ್‌ಗೆ, ಅಲ್ಲಿಂದ ಆಕ್ಸನ್ ಗೆ
- ✗ 2. ಕೋಶಕಾಯದಿಂದ ಆಕ್ಸನ್ ಗೆ, ಅಲ್ಲಿಂದ ಡೆಂಡ್ರೈಟ್‌ಗೆ
- ✓ 3. ಡೆಂಡ್ರೈಟ್ ನಿಂದ ಕೋಶಕಾಯಕ್ಕೆ, ಅಲ್ಲಿಂದ ಆಕ್ಸನ್ ಗೆ
- ✗ 4. ಆಕ್ಸನ್‌ನಿಂದ ಡೆಂಡ್ರೈಟ್‌ಗೆ, ಅಲ್ಲಿಂದ ಕೋಶಕಾಯಕ್ಕೆ

Q.27 ನಮೂದಿತ ಬೆಲೆಯ ಮೇಲೆ 15% ಮತ್ತು 12% ಗಳ ಎರಡು ಸತತ ರಿಯಾಯಿತಿಗಳನ್ನು ನೀಡಿದ ನಂತರ ಒಂದು ಟೋಪಿಯನ್ನು ಮಾರಾಟ ಮಾಡಲಾಯಿತು. ಒಂದು ವೇಳೆ ಟೋಪಿಯ ನಮೂದಿತ ಬೆಲೆಯು ₹500 ಆಗಿದ್ದರೆ, ಅದರ ಮಾರಾಟ ಬೆಲೆ ಎಷ್ಟು?

Ans
- ✗ 1. ₹395
- ✗ 2. ₹352
- ✓ 3. ₹374
- ✗ 4. ₹410

Q.28 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಿರಿ ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಿ.

ಪ್ರಶ್ನೆ:
D, G, I, K ಮತ್ತು T ಎಂಬ 5 ಕೋಲುಗಳಲ್ಲಿ ಪ್ರತಿಯೊಂದೂ ವಿಭಿನ್ನ ಎತ್ತರವನ್ನು ಹೊಂದಿದ್ದು, ಯಾವ ಕೋಲು ಅತ್ಯಂತ ಚಿಕ್ಕದಾಗಿದೆ?

ಹೇಳಿಕೆಗಳು:
(I) I ಕೋಲು ಕೇವಲ ಎರಡು ಕೋಲುಗಳಿಗಿಂತ ಎತ್ತರವಾಗಿದೆ. D ಕೋಲು I ಕೋಲಿಗಿಂತ ಚಿಕ್ಕದಾಗಿದೆ ಮತ್ತು G ಕೋಲು D ಕೋಲಿಗಿಂತ ಚಿಕ್ಕದಾಗಿದೆ.
(II) K ಕೋಲು T ಕೋಲಿಗಿಂತ ಎತ್ತರವಾಗಿದೆ.

Ans
- ✓ 1. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ
- ✗ 2. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ
- ✗ 3. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು II ಎರಡರ ಒಟ್ಟು ಮಾಹಿತಿಯು (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಸಾಕಾಗುತ್ತವೆ
- ✗ 4. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು ಹೇಳಿಕೆ II ರ ಒಟ್ಟು ಮಾಹಿತಿ ಸಾಕಾಗುವುದಿಲ್ಲ

Q.29 ರಾಜಸ್ಥಾನದ ಮೌಂಟ್ ಅಬು ಮಾಸಿಫ್‌ನಲ್ಲಿರುವ ಗುರು ಶಿಖರ್, ಭಾರತದ ಅತ್ಯಂತ ಹಳೆಯ ಮಡಿಕೆ ಪರ್ವತ ವ್ಯವಸ್ಥೆ ಎಂದು ಪರಿಗಣಿಸಲಾಗಿದ್ದು, ಇದು ಯಾವ ಪರ್ವತ ಶ್ರೇಣಿಯ ಅತ್ಯುನ್ನತ ಶಿಖರವಾಗಿದೆ?

Ans

✗ 1. ವಿಂಧ್ಯ ಶ್ರೇಣಿ

✗ 2. ಸಾತ್ಪುರ ಶ್ರೇಣಿ

✓ 3. ಅರಾವಳಿ ಶ್ರೇಣಿ

✗ 4.

ಪೂರ್ವ ಘಟ್ಟಗಳು

Q.30 ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ 12 ಎಂಬುದು 100 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ 17 ಎಂಬುದು 145 ಕ್ಕೆ ಸಂಬಂಧಿಸಿದೆ. ಹಾಗಾದರೆ ಅದೇ ತರ್ಕವನ್ನು ಅನುಸರಿಸಿದಾಗ, 24 ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಡೆಸಬೇಕು. ಉದಾ. ಸಂಖ್ಯೆ 13 ಅನ್ನು 13 ಎಂದು ತೆಗೆದುಕೊಂಡು ಅದರ ಮೇಲೆ ಸಂಕಲನ/ವ್ಯವಕಲನ/ಗುಣಾಕಾರ ಮುಂತಾದ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಆಗಿ ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

Ans

✗ 1. 224

✗ 2. 232

✓ 3. 208

✗ 4. 216

Q.31 2025 ರ ನವೆಂಬರ್ ನಲ್ಲಿ, ಭಾರತದ ಪ್ರಧಾನಮಂತ್ರಿಯವರು ಉದಯೋನ್ಮುಖ ವಿಜ್ಞಾನ, ತಂತ್ರಜ್ಞಾನ ಮತ್ತು ನಾವಿನ್ಯತೆ ಸಭೆಯಲ್ಲಿ ಹಲವಾರು ಅತ್ಯಾಧುನಿಕ ಆವಿಷ್ಕಾರಗಳಿಗೆ ಚಾಲನೆ ನೀಡಿದರು. ಈ ಕೆಳಗಿನವುಗಳಲ್ಲಿ ಪ್ರಧಾನಮಂತ್ರಿಗಳು ಪ್ರಾರಂಭಿಸಿದ ವಿಶ್ವದ ಮೊದಲ ಮಾನವೀಯ CAR-T ಕೋಶ ಚಿಕಿತ್ಸೆ ಯಾವುದು?

Ans

✗ 1. ಇಮ್ಯುನೊಕಾರ್ (ImmunoCAR)

✓ 2. ನೆಕ್ಸ್‌ಕಾರ್19 (NexCAR19)

✗ 3. ಕಾರ್‌ಸ್ಟ್ರೈಕರ್ (CARStriker)

✗ 4. ಟಿ-ಸೆಲ್‌ಎಕ್ಸ್ (T-CellX)

Q.32 ಒಂದು ಕಾರ್ಖಾನೆಯು ತೇವಾಂಶದಿಂದ ಕೂಡಿದ ಗಾಳಿಗೆ ಒಡ್ಡಿಕೊಂಡ ಕಬ್ಬಿಣದ ಕೊಳವೆಗಳ ಸಂಕ್ಷಾರಣವನ್ನು ತಡೆಗಟ್ಟಲು ಬಯಸುತ್ತದೆ. ಹಾಗಾದರೆ ಯಾವ ವಿಧಾನವು ಅತ್ಯಂತ ಪರಿಣಾಮಕಾರಿಯಾಗಿದೆ?

Ans

✗ 1. ಉತ್ಕರ್ಷಣಕ್ಕೆ ಅನುವು ಮಾಡಿಕೊಡಲು ಕಬ್ಬಿಣದ ಕೊಳವೆಗಳಿಗೆ ಯಾವುದೇ ಲೇಪನವನ್ನು ಮಾಡದೆ ಹಾಗೆಯೇ ಬಿಡುವುದು

✓ 2. ಗಾಳಿ ಮತ್ತು ತೇವಾಂಶದೊಂದಿಗೆ ನೇರ ಸಂಪರ್ಕವನ್ನು ತಡೆಗಟ್ಟಲು ಕಬ್ಬಿಣದ ಕೊಳವೆಗಳಿಗೆ ಸತುವನ್ನು ಲೇಪಿಸುವುದು

✗ 3. ಅಲೋಹ ಆಧರಿತ ಬಣ್ಣದಿಂದ ಕೊಳವೆಗಳಿಗೆ ಬಣ್ಣ ಬಳಿಯುವುದು

✗ 4. ಕಬ್ಬಿಣದ ಕೊಳವೆಗಳ ಬದಲಿಗೆ ತಾಮ್ರದ ಕೊಳವೆಗಳನ್ನು ಬಳಸುವುದು

Q.33 ಈ ಕೆಳಗಿನವುಗಳಲ್ಲಿ ಯಾವುದು ಖಾರಿಫ್ ಬೆಳೆಯಾಗಿದ್ದು, ನೈಋತ್ಯ ಮಾನ್ಸೂನ್ ಆರಂಭದೊಂದಿಗೆ ಬಿತ್ತನೆ ಮಾಡಲಾಗುತ್ತದೆ ಮತ್ತು ಶರತ್ಕಾಲದಲ್ಲಿ ಕೊಯ್ಲು ಮಾಡಲಾಗುತ್ತದೆ?

Ans

✗ 1. ಕಡಲೆ

✓ 2. ಅಕ್ಕಿ

✗ 3. ಗೋಧಿ

✗ 4. ಸಾಸಿವೆ

Q.34 ಕೆಳಗಿನ ಅಕ್ಷರ, ಚಿಹ್ನೆಗಳ ಸರಣಿಯನ್ನು ನೋಡಿ ಮತ್ತು ಪ್ರಶ್ನೆಗೆ ಉತ್ತರಿಸಿ.

(ಎಡ) M P V L V T # + $ Ω N U ʎ L M F * B V Y E (ಬಲ)

ಒಂದು ವೇಳೆ ಸರಣಿಯಿಂದ ಎಲ್ಲಾ ಚಿಹ್ನೆಗಳನ್ನು ತೆಗೆದುಹಾಕಿದರೆ, ಈ ಕೆಳಗಿನವುಗಳಲ್ಲಿ ಯಾವುದು ಬಲಗಡೆಯಿಂದ ಆರನೆಯ ಸ್ಥಾನದಲ್ಲಿರುತ್ತದೆ?

Ans

✗ 1. L

✓ 2. M

✗ 3. U

✗ 4. F

blackbook

Q.35 ಜಿಂಧಗಡ ಅಥವಾ ಅರ್ಮ ಕೊಂಡ ಎಂದೂ ಪರ್ಯಾಯವಾಗಿ ಕರೆಯಲ್ಪಡುವ ಪೂರ್ವ ಘಟ್ಟಗಳ ಅತ್ಯುನ್ನತ ಶಿಖರವು ಯಾವ ರಾಜ್ಯದಲ್ಲಿದೆ?

Ans
- ✔ 1. ಆಂಧ್ರ ಪ್ರದೇಶ
- ✘ 2. ಒಡಿಶಾ
- ✘ 3. ತಮಿಳುನಾಡು
- ✘ 4. ಕರ್ನಾಟಕ

Q.36 ಸುಧಾ ಅವರು A ಬಿಂದುವಿನಿಂದ ಚಾಲನೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು ಪೂರ್ವಕ್ಕೆ 5 km ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 22 km ಚಲಿಸುತ್ತಾರೆ. ಅವರು ಅಂತಿಮವಾಗಿ ಎಡಕ್ಕೆ ತಿರುಗಿ 4 km ಚಲಿಸುತ್ತಾರೆ ಮತ್ತು B ಬಿಂದುವಿನಲ್ಲಿ ನಿಲ್ಲುತ್ತಾರೆ. ನಮನ್ ಅವರು A ಬಿಂದುವಿನಿಂದ ಪೂರ್ವಕ್ಕೆ 42 km ದೂರದಲ್ಲಿರುವ P ಬಿಂದುವಿನಿಂದ ಚಾಲನೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು ಪಶ್ಚಿಮಕ್ಕೆ 8 km ಚಾಲನೆ ಮಾಡುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 22 km ಚಲಿಸುತ್ತಾರೆ. ಅವರು ಅಂತಿಮವಾಗಿ ಬಲಕ್ಕೆ ತಿರುಗಿ 9 km ಚಲಿಸುತ್ತಾರೆ ಮತ್ತು Q ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ Q ಬಿಂದು ಮತ್ತು B ಬಿಂದುವಿನ ನಡುವೆ ಇರುವ ಅತ್ಯಂತ ಕಡಿಮೆ ದೂರ ಎಷ್ಟು? (ಎಲ್ಲಾ ತಿರುವುಗಳು ಕೇವಲ 90-ಡಿಗ್ರಿ ತಿರುವುಗಳಾಗಿವೆ.)

Ans
- ✘ 1. 14 km
- ✔ 2. 16 km
- ✘ 3. 15 km
- ✘ 4. 17 km

Q.37 ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ NOPS ಎನ್ನುವುದು RSTW ಗೆ ಒಂದು ವಿಶಿಷ್ಟ ರೀತಿಯಲ್ಲಿ ಸಂಬಂಧಿಸಿದೆ. ಅದೇ ರೀತಿಯಲ್ಲಿ JKLO ಎನ್ನುವುದು NOPS ಗೆ ಸಂಬಂಧಿಸಿದೆ. ಇದೇ ತರ್ಕವನ್ನು ಅನುಸರಿಸಿ, ನೀಡಲಾದ ಆಯ್ಕೆಗಳಲ್ಲಿ ಯಾವುದಕ್ಕೆ DEFI ಸಂಬಂಧಿಸಿದೆ?

Ans
- ✘ 1. HIIM
- ✘ 2. HHIM
- ✔ 3. HIJM
- ✘ 4. HJIP

Q.38 ಒಂದು ರೈಲು 4 ಸೆಕೆಂಡುಗಳಲ್ಲಿ ಪ್ರತಿ ಸೆಕೆಂಡಿಗೆ 10 ಮೀಟರಿನಿಂದ ಪ್ರತಿ ಸೆಕೆಂಡಿಗೆ 30 ಮೀಟರಿಗೆ ಏಕರೂಪವಾಗಿ ವೇಗೋತ್ಕರ್ಷಗೊಳ್ಳುತ್ತದೆ. ಹಾಗಾದರೆ ಅದರ ವೇಗೋತ್ಕರ್ಷ ಎಷ್ಟು?

Ans
- ✘ 1. ಪ್ರತಿ ಸೆಕೆಂಡ್ ಸ್ಕ್ವೇರ್ ಗೆ 10 ಮೀಟರ್
- ✘ 2. ಪ್ರತಿ ಸೆಕೆಂಡ್ ಸ್ಕ್ವೇರ್ ಗೆ 8 ಮೀಟರ್
- ✘ 3. ಪ್ರತಿ ಸೆಕೆಂಡ್ ಸ್ಕ್ವೇರ್ ಗೆ 2 ಮೀಟರ್
- ✔ 4. ಪ್ರತಿ ಸೆಕೆಂಡ್ ಸ್ಕ್ವೇರ್ ಗೆ 5 ಮೀಟರ್

Q.39 ಆರು ವರ್ಷಗಳ ಹಿಂದೆ, ಕುನಾಲ್ ಮತ್ತು ಸಾಗರ್ ಅವರ ವಯಸ್ಸುಗಳ ಅನುಪಾತ 6:5 ಆಗಿತ್ತು. ಇಂದಿನಿಂದ ನಾಲ್ಕು ವರ್ಷಗಳ ನಂತರ, ಅವರ ವಯಸ್ಸುಗಳ ಅನುಪಾತ 11:10 ಆಗಿರಲಿದೆ. ಹಾಗಾದರೆ ಅವರ ಪ್ರಸ್ತುತ ವಯಸ್ಸುಗಳ ನಡುವಿನ ವ್ಯತ್ಯಾಸ (ವರ್ಷಗಳಲ್ಲಿ) ಎಷ್ಟು?

Ans
- ✘ 1. 4
- ✘ 2. 5
- ✔ 3. 2
- ✘ 4. 3

Q.40 ನೀಡಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಯಾವ ಆಯ್ಕೆ ಬರಬೇಕು?

4 8 11 15 25 29 ?

Ans
- ✘ 1. 63
- ✔ 2. 53
- ✘ 3. 56
- ✘ 4. 66

Q.41 ಸಮರ ಸಂಪ್ರದಾಯಗಳನ್ನು ಕಥೆ ಹೇಳುವಿಕೆಯೊಂದಿಗೆ ಸಂಯೋಜಿಸುವ ಛೌ ನೃತ್ಯವು ಪ್ರಮುಖವಾಗಿ ಈ ಕೆಳಗಿನ ಯಾವ ರಾಜ್ಯಗಳೊಂದಿಗೆ ಸಂಬಂಧಿಸಿದೆ?

Ans

✗ 1. ಗುಜರಾತ್, ರಾಜಸ್ಥಾನ ಮತ್ತು ಮಧ್ಯಪ್ರದೇಶ

✗ 2. ಕೇರಳ, ಕರ್ನಾಟಕ ಮತ್ತು ತಮಿಳುನಾಡು

✗ 3. ಪಂಜಾಬ್, ಹರಿಯಾಣ ಮತ್ತು ಹಿಮಾಚಲ ಪ್ರದೇಶ

✓ 4. ಒಡಿಶಾ, ಪಶ್ಚಿಮ ಬಂಗಾಳ ಮತ್ತು ಜಾರ್ಖಂಡ್

Q.42 ಹೈಡ್ರಾದಲ್ಲಿ ಮೊಗ್ಗಾಗುವಿಕೆ ಪ್ರಕ್ರಿಯೆಯ ವೇಳೆ ಮೊಗ್ಗು ದೊಡ್ಡದಾದ ನಂತರ ಅದಕ್ಕೆ ಏನಾಗುತ್ತದೆ?

Ans

✗ 1. ಅದು ಮತ್ತೆ ಪೋಷಕ ಜೀವಿಯಲ್ಲಿ ವಿಲೀನಗೊಳ್ಳುತ್ತದೆ.

✗ 2. ಇದು ಮುಖ್ಯ ಕಾಂಡಕ್ಕೆ ಅಂಟಿಕೊಂಡಿರುತ್ತದೆ.

✓ 3. ಅದು ಹೊಸ ಜೀವಿಯಾಗಿ ಬದುಕಲು ಬೇರ್ಪಡುತ್ತದೆ.

✗ 4. ಅದು ಬದುಕಲು ಬೀಜಕವಾಗಿ ರೂಪಾಂತರಗೊಳ್ಳುತ್ತದೆ.

Q.43 ಈ ಕೆಳಗೆ ಎರಡು ಸಂಖ್ಯಾ ಗಣಗಳನ್ನು ನೀಡಲಾಗಿದೆ. ಪ್ರತಿಯೊಂದು ಸಂಖ್ಯಾ ಗಣದಲ್ಲಿ, ಮೊದಲ ಸಂಖ್ಯೆಯ ಮೇಲೆ ನಡೆಸಿದ ಕೆಲವು ಗಣಿತದ ಕ್ರಿಯೆ(ಗಳು) ಎರಡನೇ ಸಂಖ್ಯೆಯನ್ನು ನೀಡುತ್ತವೆ. ಅದೇ ರೀತಿ, ಎರಡನೇ ಸಂಖ್ಯೆಯ ಮೇಲೆ ನಡೆಸಿದ ಕೆಲವು ಗಣಿತದ ಕ್ರಿಯೆ(ಗಳು) ಮೂರನೇ ಸಂಖ್ಯೆಯನ್ನು ನೀಡುತ್ತವೆ ಮತ್ತು ಹೀಗೆ ಮುಂದುವರಿಯುತ್ತದೆ. ಈ ಕೆಳಗಿನ ಯಾವ ಆಯ್ಕೆಯು ಕೊಟ್ಟಿರುವ ಸಂಖ್ಯಾ ಗಣಗಳು ಅನುಸರಿಸುವ ಗಣಿತದ ಕ್ರಿಯೆಗಳನ್ನೇ ಅನುಸರಿಸುತ್ತದೆ?
(ಸೂಚನೆ: ಗಣಿತದ ಕ್ರಿಯೆ(ಗಳನ್ನು) ನಡೆಸಲು ಎರಡು/ಮೂರು ಅಂಕಿಯ ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸುವಂತಿಲ್ಲ. ಉದಾ. ಒಂದು ವೇಳೆ 37 ರ ನಂತರ 10 ಇದ್ದರೆ, ಕ್ರಿಯೆಯು 3+7 ಆಗಿರಬಾರದು. ಏಕೆಂದರೆ ಎರಡಂಕಿ ಸಂಖ್ಯೆಯನ್ನು ಪ್ರತ್ಯೇಕ ಅಂಕಿಗಳಾಗಿ ವಿಭಜಿಸುವಂತಿಲ್ಲ.)

4 - 14 - 24 - 34 ; 10 - 20 - 30 - 40

Ans

✗ 1. 17 - 37 - 47 - 57

✗ 2. 5 - 10 - 20 - 30

✓ 3. 32 - 42 - 52 - 62

✗ 4. 39 - 49 - 59 - 79

Q.44 ಒಂದು ವಿಜ್ಞಾನ ಪ್ರಯೋಗಾಲಯದಲ್ಲಿ ತಿರುಗುತ್ತಿರುವ ಟರ್ನ್‌ಟೇಬಲ್ ನ ವಿರುದ್ಧ ಬದಿಗಳಲ್ಲಿ ಎರಡು ಗೋಲಿಗಳು ನಿಶ್ಚಲ ಸ್ಥಿತಿಯಲ್ಲಿವೆ. ಟೇಬಲ್ ಹಠಾತ್ತನೆ ನಿಲ್ಲುತ್ತದೆ. ಟೇಬಲ್ ನಿಂತ ತಕ್ಷಣದಲ್ಲಿ ಗೋಲಿಗಳ ಚಲನೆಯನ್ನು ಈ ಕೆಳಗಿನ ಯಾವುದು ಅತ್ಯುತ್ತಮವಾಗಿ ಊಹಿಸುತ್ತದೆ?

Ans

✗ 1. ಘರ್ಷಣೆಯಿಂದಾಗಿ ಗೋಲಿಗಳು ತಕ್ಷಣವೇ ಸಂಪೂರ್ಣವಾಗಿ ನಿಲುಗಡೆಗೆ ಬರುತ್ತವೆ

✓ 2. ಅವುಗಳ ಜಡತ್ವದಿಂದಾಗಿ ಗೋಲಿಗಳು ಸ್ಪರ್ಶಕೀಯವಾಗಿ ಚಲಿಸುವುದನ್ನು ಮುಂದುವರಿಸುತ್ತವೆ

✗ 3. ಅದು ನಿಂತ ತಕ್ಷಣ ಗೋಲಿಗಳು ಮೇಜಿನ ಮಧ್ಯಭಾಗದ ಕಡೆಗೆ ನೇರವಾಗಿ ಉರುಳುತ್ತವೆ

✗ 4. ಮೇಜಿನ ಹೊಸ ಸ್ಥಾನಕ್ಕೆ ಹೊಂದಿಕೆಯಾಗುವಂತೆ ಗೋಲಿಗಳು ತಕ್ಷಣ ದಿಕ್ಕನ್ನು ಬದಲಾಯಿಸುತ್ತವೆ

Q.45 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ-ಗುಚ್ಛವು ಅದರಲ್ಲಿನ ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ-ಗುಚ್ಛದಲ್ಲಿ ಅವುಗಳ ಸ್ಥಾನಗಳನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ)

Ans

✗ 1. BAE

✗ 2. CBF

✗ 3. HGK

✓ 4. UUX

Q.46 ಅಧಿಕ ಪ್ರತಿಕ್ರಿಯಾತ್ಮಕ ಗುಣ ಹೊಂದಿರುವ ಮೆಗ್ನೀಸಿಯಂ ಮತ್ತು ಅಲ್ಯುಮಿನಿಯಂ ರೀತಿಯ ಲೋಹಗಳನ್ನು ಅವುಗಳ ಅದಿರಿನಿಂದ ಪಡೆಯಲು ಇಂಗಾಲವನ್ನು ಏಕೆ ಬಳಸಲಾಗುವುದಿಲ್ಲ?

Ans

✗ 1. ಈ ಲೋಹಗಳು ನೈಸರ್ಗಿಕವಾಗಿ ಮುಕ್ತ ಸ್ಥಿತಿಯಲ್ಲಿ ದೊರೆಯುತ್ತವೆ, ಆದ್ದರಿಂದ ಅವುಗಳನ್ನು ಉದ್ಧರಣ ಕ್ರಿಯೆಗೆ ಒಳಪಡಿಸುವ ಅಗತ್ಯವಿಲ್ಲ.

✗ 2. ಇಂಗಾಲವು ಈ ಲೋಹಗಳ ಜೊತೆ ವರ್ತಿಸಿ ಕಾರ್ಬೈಡ್‌ಗಳನ್ನು ರಚಿಸುತ್ತದೆ.

✓ 3. ಈ ಲೋಹಗಳು ಇಂಗಾಲಕ್ಕಿಂತ ಆಮ್ಲಜನಕಕ್ಕೆ ಹೆಚ್ಚು ಆಕರ್ಷಣೆಯನ್ನು ಹೊಂದಿವೆ.

✗ 4. ಉದ್ಧರಣ ಕ್ರಿಯೆಯಲ್ಲಿ ಬಳಸಲಾಗುವ ಅಧಿಕ ತಾಪಮಾನಗಳಲ್ಲಿ ಇಂಗಾಲಕ್ಕೆ ಬೆಂಕಿ ತಾಗುತ್ತದೆ.

black book

Q.47 ದೊಡ್ಡ ಸಭಾಂಗಣವು ಬರಿದಾದ ಗೋಡೆಗಳು ಮತ್ತು ಗಟ್ಟಿಯಾದ ಚಾವಣಿಯನ್ನು ಹೊಂದಿರುತ್ತದೆ. ಧ್ವನಿವರ್ಧಕ ನಿಂತ ನಂತರವೂ ಸ್ವಲ್ಪ ಸಮಯದವರೆಗೆ ಶಬ್ದವು ಮುಂದುವರೆಯುವುದರಿಂದ ಜನರು ಭಾಷಣಗಳನ್ನು ಸ್ಪಷ್ಟವಾಗಿ ಕೇಳಲು ಪ್ರಯಾಸಪಡುತ್ತಾರೆ. ಇದಕ್ಕೆ ಅತ್ಯಂತ ಸಂಭವನೀಯ ಕಾರಣ ಯಾವುದು?

Ans

✗ 1. ಮುಚ್ಚಿದ ಜಾಗಗಳಲ್ಲಿ ಶಬ್ದವು ಸರಿಯಾಗಿ ಚಲಿಸಲು ಸಾಧ್ಯವಿಲ್ಲ

✗ 2. ಧ್ವನಿವರ್ಧಕದ ತಾರಕತೆಯು ತುಂಬಾ ಕಡಿಮೆಯಾಗಿರುತ್ತದೆ

✓ 3. ಗಟ್ಟಿಯಾದ ಮೇಲ್ಮೈಗಳಿಂದ ಬರುವ ಶಬ್ದದ ಬಹು ಪ್ರತಿಫಲನಗಳು ಅನುರಣನೆಯನ್ನು ಉಂಟುಮಾಡುತ್ತವೆ

✗ 4. ಸಭಾಂಗಣದ ಒಳಗೆ ಶಬ್ದದ ವೇಗವು ಕಡಿಮೆಯಾಗುತ್ತದೆ

Q.48 ಬಳಸಿ ಬಿಸಾಡುವ ವಸ್ತುಗಳ ಬಗ್ಗೆ ಬದಲಾಗುತ್ತಿರುವ ವರ್ತನೆಗಳಿಂದ ಪರಿಸರದ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಒಂದು ಶಾಲೆಯು ಜಾಗೃತಿ ಅಭಿಯಾನವನ್ನು ಆಯೋಜಿಸಲು ನಿರ್ಧರಿಸಿದೆ. ಈ ಸಮಸ್ಯೆಗಳನ್ನು ಅತ್ಯುತ್ತಮವಾಗಿ ಪರಿಹರಿಸಲು ಅವರು ಯಾವ ಪರಿಹಾರಗಳ ಸಂಯೋಜನೆಯನ್ನು ಉತ್ತೇಜಿಸಬೇಕು?

Ans

✓ 1. ಮರುಬಳಕೆ ಮಾಡಬಹುದಾದ ಉತ್ಪನ್ನಗಳನ್ನು ಉತ್ತೇಜಿಸುವುದು ಮತ್ತು ತ್ಯಾಜ್ಯ ಬೇರ್ಪಡಿಸುವ ಬಗ್ಗೆ ಶಿಕ್ಷಣ ನೀಡುವುದು

✗ 2. ಜಾಗೃತಿ ಕಾರ್ಯಕ್ರಮಗಳನ್ನು ನಡೆಸದೆ ಜೈವಿಕ ವಿಘಟನೀಯ ಪ್ಯಾಕೇಜಿಂಗ್ ಮೇಲೆ ಮಾತ್ರ ಗಮನ ಹರಿಸುವುದು

✗ 3. ಒಂದೇ ಬಾರಿ ಬಳಸುವ ಪ್ಲಾಸ್ಟಿಕ್‌ಗಳ ಬಳಕೆಯನ್ನು ಮಾತ್ರ ಉತ್ತೇಜಿಸುವುದು

✗ 4. ಭೂಭರ್ತಿ ಜಾಗವನ್ನು ಹೆಚ್ಚಿಸುವುದು ಮತ್ತು ಮರುಬಳಕೆಯನ್ನು ನಿರ್ಲಕ್ಷಿಸುವುದು

Q.49 2 m ಉದ್ದ ಮತ್ತು $1\times10^{-6}\ m^2$ ಅಡ್ಡ-ಛೇದನ ವಿಸ್ತೀರ್ಣ ಹೊಂದಿರುವ ಒಂದು ತಾಮ್ರದ ತಂತಿಯು 0.034 Ω ರೋಧವನ್ನು ಹೊಂದಿದೆ. ಹಾಗಾದರೆ ತಾಮ್ರದ ರೋಧತೆ ಎಷ್ಟು?

Ans

✓ 1. $1.7\times10^{-8}\ \Omega\cdot m$

✗ 2. $1.07\times10^{-7}\ \Omega\cdot m$

✗ 3. $6.8\times10^{-8}\ \Omega\cdot m$

✗ 4. $3.4\times10^{-8}\ \Omega\cdot m$

Q.50 ಕ್ಲೋರಿನ್‌ನ ಸಾಪೇಕ್ಷ ಪರಮಾಣು ದ್ರವ್ಯರಾಶಿಯು 35.5 ಆಗಿದೆ. ಆದರೆ ಕ್ಲೋರಿನ್‌ನ ಯಾವುದೇ ಪರಮಾಣುವೂ ಈ ನಿಖರವಾದ ದ್ರವ್ಯರಾಶಿಯನ್ನು ಹೊಂದಿಲ್ಲ. ಈ ಅವಲೋಕನವನ್ನು ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

Ans

✗ 1. ಕ್ಲೋರಿನ್‌ನ ಪರಮಾಣು ದ್ರವ್ಯರಾಶಿಯು ತಾಪಮಾನಕ್ಕೆ ಅನುಗುಣವಾಗಿ ಬದಲಾಗುತ್ತದೆ.

✗ 2. ಸಂಯುಕ್ತಗಳನ್ನು ರೂಪಿಸುವಾಗ ಕ್ಲೋರಿನ್ ಪರಮಾಣುಗಳು ದ್ರವ್ಯರಾಶಿಯನ್ನು ಕಳೆದುಕೊಳ್ಳುತ್ತವೆ.

✓ 3. ವಿಭಿನ್ನ ದ್ರವ್ಯರಾಶಿಗಳನ್ನು ಹೊಂದಿರುವ ಸಮಸ್ಥಾನೀಯಗಳ ಮಿಶ್ರಣವಾಗಿ ಕ್ಲೋರಿನ್ ಪರಮಾಣುಗಳು ಅಸ್ತಿತ್ವದಲ್ಲಿವೆ.

✗ 4. ಕ್ಲೋರಿನ್ ಪರಮಾಣುಗಳು ಪ್ರೋಟಾನ್‌ಗಳ ಭಾಗಶಃ ಸಂಖ್ಯೆಯನ್ನು ಹೊಂದಿರುತ್ತವೆ.

Q.51 ಖೇಲೋ ಇಂಡಿಯಾ ಚಳಿಗಾಲದ ಕ್ರೀಡಾಕೂಟ 2026 ರ ಯಾವ ಸ್ಪರ್ಧೆಯಲ್ಲಿ ಮಧ್ಯಪ್ರದೇಶದ ಉದ್ಯೇಕಾ ಸಿಂಗ್ ಅವರು ಚಿನ್ನದ ಪದಕ ಗೆದ್ದಿದ್ದಾರೆ?

Ans

✓ 1. ಐಸ್ ಸ್ಕೇಟಿಂಗ್ – ಲಾಂಗ್ ಟ್ರ್ಯಾಕ್ 500 m

✗ 2. ಆಲ್ಪೈನ್ ಸ್ಕೀಯಿಂಗ್

✗ 3. ಸ್ನೋಬೋರ್ಡಿಂಗ್

✗ 4. ಫಿಗರ್ ಸ್ಕೇಟಿಂಗ್

Q.52 ಕ್ರಿಯಾಶೀಲತೆ ಸರಣಿಯು ಏನನ್ನು ಪ್ರತಿನಿಧಿಸುತ್ತದೆ?

Ans

✗ 1. ಅನಿಲಗಳ ಸಾಂದ್ರತೆಯ ಕ್ರಮದಲ್ಲಿ ಅವುಗಳ ಜೋಡಣೆ

✓ 2. ಲೋಹಗಳ ಕ್ರಿಯಾಶೀಲತೆಯ ಕ್ರಮದಲ್ಲಿ ಅವುಗಳ ಜೋಡಣೆ

✗ 3. ಆಮ್ಲಗಳ ಬಲಕ್ಕೆ ಅನುಗುಣವಾಗಿ ಅವುಗಳ ಜೋಡಣೆ

✗ 4. ಲವಣಗಳ ಕರಗುವಿಕೆಯ ಕ್ರಮದಲ್ಲಿ ಅವುಗಳ ಜೋಡಣೆ

Q.53 A ಮತ್ತು B ಅವರು 3 : 8 ರ ಅನುಪಾತದಲ್ಲಿ ಒಂದು ವ್ಯಾಪಾರದಲ್ಲಿ ಹೂಡಿಕೆ ಮಾಡುತ್ತಾರೆ. ವರ್ಷದ ಕೊನೆಯಲ್ಲಿ, ಒಟ್ಟು ಲಾಭದ 20% ವನ್ನು ದತ್ತಿ ಸಂಸ್ಥೆಗೆ ದಾನ ಮಾಡಲಾಗುತ್ತದೆ, ಮತ್ತು ಉಳಿದ ಲಾಭವನ್ನು A ಮತ್ತು B ಅವರ ನಡುವೆ ಅವರ ಹೂಡಿಕೆಗಳ ಅನುಪಾತದಲ್ಲಿ ವಿಂಗಡಿಸಲಾಗುತ್ತದೆ. ಒಂದು ವೇಳೆ A ಅವರು ₹2028 ಅನ್ನು ತಮ್ಮ ಪಾಲಾಗಿ ಪಡೆದರೆ, ಆ ವ್ಯಾಪಾರವು ಗಳಿಸಿದ ಒಟ್ಟು ಲಾಭವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans
- ✗ 1. 9245
- ✗ 2. 9345
- ✗ 3. 9145
- ✓ 4. 9295

Q.54 ಈ ಕೆಳಗಿನ ಯಾವ ಪ್ರದೇಶವು ಅತ್ಯಂತ ಚಿಕ್ಕ ಪ್ರದೇಶದ ಮೇಲೆ ಸೂರ್ಯನ ಕಿರಣಗಳನ್ನು ಪಡೆಯುತ್ತದೆ?

Ans
- ✗ 1. ಉತ್ತರದ ಪ್ರದೇಶ
- ✓ 2. ಸಮಭಾಜಕ ಪ್ರದೇಶ
- ✗ 3. ಧ್ರುವ ಪ್ರದೇಶ
- ✗ 4. ಸಮಶೀತೋಷ್ಣ ಪ್ರದೇಶ

Q.55 ಒಬ್ಬ ಕಾರು ವ್ಯಾಪಾರಿಯು ಒಂದು ಕಾರಿನ ಬೆಲೆಯನ್ನು ₹6,75,000 ಎಂದು ನಮೂದಿಸುತ್ತಾನೆ. ಅದರ ಮೇಲೆ ಒಂದಷ್ಟು ರಿಯಾಯಿತಿಯನ್ನು ಪಡೆದ ನಂತರ, ಒಬ್ಬ ಗ್ರಾಹಕರು ₹6,07,500 ಅನ್ನು ಪಾವತಿಸುತ್ತಾರೆ. ಹಾಗಾದರೆ ನೀಡಲಾದ ಶೇಕಡಾ ರಿಯಾಯಿತಿ ಎಷ್ಟು?

Ans
- ✗ 1. 8%
- ✗ 2. 12%
- ✗ 3. 15%
- ✓ 4. 10%

Q.56 3 ಪ್ರೋಟಾನ್‌ಗಳು ಮತ್ತು 4 ನ್ಯೂಟ್ರಾನ್‌ಗಳನ್ನು ಹೊಂದಿರುವ ಮೂಲಧಾತುವಿನ ಸಂಕೇತ:

Ans
- ✗ 1. C
- ✗ 2. B
- ✓ 3. Li
- ✗ 4. Be

Q.57 ಒಂದು ಕಾರು ಸಮಯದ ಸಮಾನ ಮಧ್ಯಂತರಗಳಲ್ಲಿ ಸಮಾನ ದೂರವನ್ನು ಕ್ರಮಿಸಿದರೆ, ಅದರ ದೂರ-ಸಮಯದ ರೇಖಾಚಿತ್ರವು _____ ಅನ್ನು ತೋರಿಸುತ್ತದೆ.

Ans
- ✗ 1. ಜಿಗ್ ಜಾಗ್ (ಅಂಕುಡೊಂಕಾದ) ರೇಖೆ
- ✗ 2. ಬಾಗಿದ ರೇಖೆ
- ✗ 3. ಸಮತಲವಾದ ನೇರ ರೇಖೆ
- ✓ 4. ಸಮಯ ಅಕ್ಷದೊಂದಿಗೆ ಬಾಗಿದ ನೇರ ರೇಖೆ

Q.58 ಒಂದು ಸಮಬಾಹು ತ್ರಿಭುಜದ ಪರಿತ್ರಿಜ್ಯವು 26 cm ಆಗಿದೆ. ಹಾಗಾದರೆ ಆ ತ್ರಿಭುಜದ ಆಂತರಿಕ ತ್ರಿಜ್ಯವನ್ನು ಕಂಡುಹಿಡಿಯಿರಿ.

Ans
- ✗ 1. 26 cm
- ✓ 2. 13 cm
- ✗ 3. 8 cm
- ✗ 4. 52 cm

Q.59 MENTHOL ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಜೋಡಿಸಲಾಗಿದೆ. ಆಗ ರೂಪುಗೊಂಡ ಹೊಸ ಅಕ್ಷರ ಗುಚ್ಛದಲ್ಲಿ ಎಡದಿಂದ ಎರಡನೆಯ ಅಕ್ಷರ ಮತ್ತು ಬಲದಿಂದ ಎರಡನೆಯ ಅಕ್ಷರದ ನಡುವೆ ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಎಷ್ಟು ಅಕ್ಷರಗಳಿರುತ್ತವೆ?

Ans
- ✗ 1. 7
- ✗ 2. 9
- ✗ 3. 5
- ✓ 4. 6

blackbook

Q.60 ಒಬ್ಬ ವಿದ್ಯಾರ್ಥಿಯು ದೂರದ ವಸ್ತು ವಿಧಾನವನ್ನು ಬಳಸಿಕೊಂಡು ನಿಮ್ಮ ದರ್ಪಣದ ಸಂಗಮದೂರವನ್ನು ಅಳೆಯುತ್ತಾನೆ, ಆದರೆ ಪರದೆಯನ್ನು ಸರಿಯಾದ ಸಂಗಮಬಿಂದುವಿನಿಂದ ಸ್ವಲ್ಪ ದೂರದಲ್ಲಿ ಇರಿಸುತ್ತಾನೆ. ಪರದೆಯ ಮೇಲೆ ರೂಪುಗೊಂಡ ಬಿಂಬದ ಮೇಲೆ ಹೆಚ್ಚು ಪರಿಣಾಮ ಬೀರುವ ಸಾಧ್ಯತೆ ಏನು?

Ans

✔ 1. ಸಂಗಮದ ಹೊರಗಿರುವ ಕಾರಣ ಬಿಂಬವು ಸ್ವಲ್ಪ ಮಸುಕಾಗಿ ಕಾಣಿಸುತ್ತದೆ

✘ 2. ಬಿಂಬವು ಬದಲಾಗದ ತೀಕ್ಷ್ಣತೆಯೊಂದಿಗೆ ಪಾರ್ಶ್ವಕ್ಕೆ ಪಲ್ಲಟವಾಗುತ್ತದೆ

✘ 3. ಬಿಂಬವು ಸಂಗಮ ಸಮತಲ (focal plane) ಕ್ಕಿಂತ ಹೆಚ್ಚು ತೀಕ್ಷ್ಣವಾಗಿ ಮತ್ತು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ

✘ 4. ಬಿಂಬವು ದೊಡ್ಡದಾಗಿರುತ್ತದೆ ಆದರೆ ಪರಿಪೂರ್ಣ ಸಂಗಮವನ್ನು ಉಳಿಸಿಕೊಳ್ಳುತ್ತದೆ

Q.61 ಒಂದು ಶಾಲೆಯ X ತರಗತಿಯಲ್ಲಿ A ಮತ್ತು B ಎಂಬ ಎರಡು ವಿಭಾಗಗಳಿವೆ. X A ತರಗತಿಯು ವಿಜ್ಞಾನದಲ್ಲಿ ಗಳಿಸಿದ ಸರಾಸರಿ ಅಂಕಗಳು 76 ಆಗಿದೆ ಮತ್ತು X B ತರಗತಿಯು ವಿಜ್ಞಾನದಲ್ಲಿ ಗಳಿಸಿದ ಸರಾಸರಿ ಅಂಕಗಳು 71 ಆಗಿದೆ. X A ಮತ್ತು X B ಗಳು ವಿಜ್ಞಾನದಲ್ಲಿ ಗಳಿಸಿದ ಅಂಕಗಳ ವಿಪಲ್ಲಟವು (variance) ಕ್ರಮವಾಗಿ 2.16 ಮತ್ತು 5.16 ಆಗಿವೆ. ಒಂದು ವೇಳೆ X A ತರಗತಿಯಲ್ಲಿ 22 ವಿದ್ಯಾರ್ಥಿಗಳಿದ್ದರೆ ಮತ್ತು X B ತರಗತಿಯಲ್ಲಿ 28 ಜನ ವಿದ್ಯಾರ್ಥಿಗಳಿದ್ದರೆ, ಶಾಲೆಯ X ತರಗತಿಯ ವಿದ್ಯಾರ್ಥಿಗಳು ಗಳಿಸಿದ ವಿಜ್ಞಾನದ ಅಂಕಗಳ ವಿಪಲ್ಲಟವನ್ನು ಕಂಡುಹಿಡಿಯಿರಿ.

Ans

✔ 1. 10

✘ 2. 3.66

✘ 3. 7

✘ 4. 3.84

Q.62 ಒಂದು ಗ್ರಾಮೀಣ ಪ್ರದೇಶದಲ್ಲಿ, ಒಂದು ಸರ್ಕಾರೇತರ ಸಂಸ್ಥೆಯು, 30 ಹಳ್ಳಿಗಳಲ್ಲಿನ ಕುಟುಂಬಗಳ ಮಾಸಿಕ ಆದಾಯದ ಹಂಚಿಕೆಯನ್ನು ಅರ್ಥಮಾಡಿಕೊಳ್ಳಲು ಒಂದು ಸಮೀಕ್ಷೆಯನ್ನು ನಡೆಸಿತು. ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ಆದಾಯಗಳನ್ನು ವಿವಿಧ ಶ್ರೇಣಿಗಳಾಗಿ ವಿಂಗಡಿಸಲಾಗಿದೆ.

ಆದಾಯ ಶ್ರೇಣಿ (₹ ಗಳಲ್ಲಿ)	ಕುಟುಂಬಗಳ ಸಂಖ್ಯೆ
0 - 5,000	8
5,001 - 10,000	15
10,001 - 15,000	22
15,001 - 20,000	30
20,001 - 25,000	25
25,001 - 30,000	20
30,001 - 35,000	10

ಹಾಗಾದರೆ ಪರಮಾವರ್ತ ಆದಾಯವನ್ನು (modal income) ಕಂಡುಹಿಡಿಯಿರಿ (₹ ಯ ಹತ್ತಿರದ ಪೂರ್ಣಾಂಕ ಮೌಲ್ಯಕ್ಕೆ ಸರಿಹೊಂದಿಸಿ).

Ans

✘ 1. ₹18,000

✔ 2. ₹18,077

✘ 3. ₹18,559

✘ 4. ₹17,965

Q.63 ಈ ಕೆಳಗಿನವುಗಳಲ್ಲಿ ಫೆರಿಕ್ ಆಕ್ಸೈಡ್‌ನ ಸರಿಯಾದ ರಾಸಾಯನಿಕ ಸೂತ್ರ ಯಾವುದು?

Ans

✘ 1. Fe_2O_4

✔ 2. Fe_2O_3

✘ 3. FeO

✘ 4. Fe_3O_2

Q.64 ಅರವಿಂದ್ ಅವರು ಒಂದು ವಸ್ತುವನ್ನು ₹x ಗೆ ಖರೀದಿಸಿದರು. ಅವರು ಅದನ್ನು ಬೀರೂ ಅವರಿಗೆ 16% ನಷ್ಟದಲ್ಲಿ ಮಾರಾಟ ಮಾಡಿದರು. ಬೀರೂ ಅವರು ಅದರ ಸಾಗಾಟಕ್ಕಾಗಿ ₹159 ಖರ್ಚು ಮಾಡಿ, ಅದನ್ನು ಮೀನೂ ಅವರಿಗೆ 56% ಲಾಭಕ್ಕೆ ಮಾರಾಟ ಮಾಡಿದರು. ಒಂದು ವೇಳೆ ಮೀನೂ ಅವರು ಅದನ್ನು ₹1,755 ಕ್ಕೆ ಖರೀದಿಸಿದ್ದರೆ, x ನ ಮೌಲ್ಯ (₹ ಗಳಲ್ಲಿ) ಎಷ್ಟು?

Ans

✔ 1. 1,150

✘ 2. 1,075

✘ 3. 1,100

✘ 4. 1,125

blackbook

Q.65 ಯಾವ ಹೇಳಿಕೆಯು ಮೈಟೋಸಿಸ್ ಅನ್ನು ಮಿಯೋಸಿಸ್ ನಿಂದ ಪ್ರತ್ಯೇಕಿಸುತ್ತದೆ?

Ans

✗ 1. ಮೈಟೋಸಿಸ್ ಆನುವಂಶಿಕ ವೈವಿಧ್ಯತೆಯನ್ನು ಹೆಚ್ಚಿಸುತ್ತದೆ, ಆದರೆ ಮಿಯೋಸಿಸ್ ಒಂದೇ ರೀತಿಯ ಕೋಶಗಳನ್ನು ಉತ್ಪಾದಿಸುತ್ತದೆ.

✗ 2. ಮೈಟೋಸಿಸ್ ವರ್ಣತಂತುಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತದೆ, ಆದರೆ ಮಿಯೋಸಿಸ್ ಹಾಗೆ ಮಾಡುವುದಿಲ್ಲ.

✓ 3. ಮೈಟೋಸಿಸ್ ಒಂದೇ ರೀತಿಯ ಕೋಶಗಳನ್ನು ಉತ್ಪಾದಿಸುತ್ತದೆ, ಆದರೆ ಮಿಯೋಸಿಸ್ ಆನುವಂಶಿಕ ವ್ಯತ್ಯಾಸದೊಂದಿಗೆ ಕೋಶಗಳನ್ನು ಸೃಷ್ಟಿಸುತ್ತದೆ.

✗ 4. ಮೈಟೋಸಿಸ್ ನಾಲ್ಕು ಕೋಶಗಳನ್ನು ಸೃಷ್ಟಿಸುತ್ತದೆ, ಆದರೆ ಮಿಯೋಸಿಸ್ ಎರಡು ಕೋಶಗಳನ್ನು ಸೃಷ್ಟಿಸುತ್ತದೆ.

Q.66 ಸಂಯುಕ್ತದ ಅಣುಗಳನ್ನು ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

Ans

✗ 1. ಅವು ಒಟ್ಟಿಗೆ ಬಂಧಿಸಲ್ಪಟ್ಟಿರುವ ಕೇವಲ ಒಂದೇ ರೀತಿಯ ಪರಮಾಣುಗಳಿಂದ ಮಾಡಲ್ಪಟ್ಟಿವೆ.

✗ 2.
ಅವು ಯಾವಾಗಲೂ ನಿಖರವಾಗಿ ಎರಡು ಪರಮಾಣುಗಳನ್ನು ಒಟ್ಟಿಗೆ ಬಂಧಿಸಲ್ಪಟ್ಟಿರುವುದನ್ನು ಒಳಗೊಂಡಿದೆ.

✗ 3. ಅವು ಬೇರೆ ಬೇರೆ ಪರಮಾಣುಗಳ ಭೌತಿಕ ಮಿಶ್ರಣವಾಗಿದ್ದು, ರಾಸಾಯನಿಕವಾಗಿ ಬಂಧಿಸಲ್ಪಟ್ಟಿಲ್ಲ

✓ 4. ಅವುಗಳು ಒಟ್ಟಿಗೆ ರಾಸಾಯನಿಕವಾಗಿ ಬಂಧಿಸಲ್ಪಟ್ಟಿರುವ ಬೇರೆ ಬೇರೆ ಪರಮಾಣುಗಳನ್ನು ಹೊಂದಿರುತ್ತವೆ.

Q.67 400 N ತೂಕವಿರುವ A ಎಂಬ 8 m ಎತ್ತರವನ್ನು 20 s ಗಳಲ್ಲಿ ಏರುತ್ತಾಳೆ. B ಎಂಬ ಹುಡುಗಿಯು ಸಹ 400 N ತೂಕವನ್ನು ಹೊಂದಿದ್ದು 50 s ಗಳಲ್ಲಿ ಅದೇ ಎತ್ತರವನ್ನು ಏರುತ್ತಾಳೆ. ಹಾಗಾದರೆ ಇಬ್ಬರು ಹುಡುಗಿಯರು ವ್ಯಯಿಸಿದ ಶಕ್ತಿಯ ವ್ಯತ್ಯಾಸ ಎಷ್ಟು?

Ans

✗ 1.
64 W

✗ 2.
160 W

✓ 3.
96 W

✗ 4.
128 W

Q.68 ಒಂದು ಜಿಲ್ಲೆಯ ಜನಸಂಖ್ಯೆಯು 3,61,000 ಆಗಿದ್ದು, ಅದರಲ್ಲಿ ಪುರುಷರ ಸಂಖ್ಯೆಯು 2,35,000 ಆಗಿದೆ. ಒಟ್ಟು ಜನಸಂಖ್ಯೆಯ 15% ಮಂದಿ ಸಾಕ್ಷರರಾಗಿದ್ದಾರೆ. ಒಂದು ವೇಳೆ 15% ಪುರುಷರು ಸಾಕ್ಷರರಾಗಿದ್ದರೆ, ಎಷ್ಟು ಶೇಕಡಾ ಮಹಿಳೆಯರು ಸಾಕ್ಷರರಾಗಿದ್ದಾರೆ?

Ans

✓ 1. 15%

✗ 2. 20%

✗ 3. 12%

✗ 4. 8%

Q.69 ಒಂದು ವೇಳೆ ಎರಡು ಸಂಖ್ಯೆಗಳ ಅನುಪಾತ 6 : 7 ಆಗಿದ್ದರೆ, ಮತ್ತು ಅವುಗಳ ಮಸಾಅ 8 ಆಗಿದ್ದರೆ, ಅವುಗಳ ಲಸಾಅ ಎಷ್ಟು?

Ans

✗ 1. 280

✗ 2. 392

✗ 3. 224

✓ 4. 336

Q.70 ಬೆಳೆಯುತ್ತಿರುವ ಭ್ರೂಣಕ್ಕೆ ದುರ್ಬಲ ಸ್ನಾಯುವಿನ ಬೆಂಬಲವಿರುವುದರಿಂದಾಗಿ ಮಹಿಳೆಯೊಬ್ಬರು ಗರ್ಭಾವಸ್ಥೆಯನ್ನು ಪೂರ್ಣಾವಧಿಯವರೆಗೆ ಮುಂದುವರಿಸಲು ಕಷ್ಟಪಡುತ್ತಿದ್ದಾರೆ. ಹಾಗಾದರೆ ಇದಕ್ಕೆ ಕಾರಣವಾಗಿರುವ ಸಂಭವನೀಯ ಅಂಗ ಯಾವುದು?

Ans

✗ 1. ಯೋನಿ

✗ 2. ಗರ್ಭಕೋಶದ–ಕಂಠ

✗ 3. ಅಂಡಾಶಯ

✓ 4. ಗರ್ಭಕೋಶ

Q.71 ಪ್ರಮುಖ ಕಡಲ ಪ್ರವಾಸಿ ಸುರಕ್ಷತೆ ಮತ್ತು ತುರ್ತು ಪ್ರತಿಕ್ರಿಯೆ ಘಟನೆಯಿಂದಾಗಿ ಜುಲೈ 2026 ರಲ್ಲಿ ಥೈಲ್ಯಾಂಡ್ ಕೊಲ್ಲಿಯಲ್ಲಿರುವ ಯಾವ ವಿಯೆಟ್ನಾಂ ರೆಸಾರ್ಟ್ ದ್ವೀಪವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಲ್ಲಿತ್ತು?

Ans

✓ 1. ಫು ಕ್ವೋಕ್ ದ್ವೀಪ

✗ 2. ಸೆಬು ದ್ವೀಪ

✗ 3. ಪೆನಾಂಗ್ ದ್ವೀಪ

✗ 4. ಬಾಲಿ ದ್ವೀಪ

Q.72 ಒಬ್ಬ ಸಂಶೋಧಕರು ತೇವಾಂಶವುಳ್ಳ ಕಾಡಿನಲ್ಲಿ ಶಿಥಿಲವಾಗುತ್ತಿರುವ ಮರದ ಮೇಲೆ ಬೆಳೆಯುತ್ತಿರುವ ಜೀವಿಗಳನ್ನು ಗಮನಿಸುತ್ತಾರೆ. ಅವುಗಳು ಪತ್ರಹರಿತ್ತನ್ನು ಹೊಂದಿರುವುದಿಲ್ಲ ಮತ್ತು ಬೀಜಕಗಳಿಂದ ಸಂತಾನೋತ್ಪತ್ತಿ ಮಾಡುತ್ತವೆ. ಈ ಜೀವಿಗಳು ಯಾವ ಗುಂಪಿಗೆ ಸೇರಿವೆ?

Ans
✗ 1. ಬ್ಯಾಕ್ಟೀರಿಯಾ
✓ 2. ಶಿಲೀಂಧ್ರಗಳು
✗ 3. ಸಸ್ಯಗಳು
✗ 4. ಪ್ರೋಟೊಜೋವಾ

Q.73 ಭಾರತದ ಸಂವಿಧಾನದ ಯಾವ ಅನುಚ್ಛೇದವು ಸಂವಿಧಾನದ ಪ್ರಾರಂಭದಲ್ಲಿ ನಾಗರಿಕತ್ವವನ್ನು ನೀಡುತ್ತದೆ?

Ans
✗ 1. ಅನುಚ್ಛೇದ 6
✓ 2. ಅನುಚ್ಛೇದ 5
✗ 3. ಅನುಚ್ಛೇದ 16
✗ 4. ಅನುಚ್ಛೇದ 26

Q.74 ಒಂದು ನಿರ್ದಿಷ್ಟ ಅಸಲು ಮೊತ್ತವನ್ನು ವಾರ್ಷಿಕ 20% ಚಕ್ರ ಬಡ್ಡಿಯ ದರದಲ್ಲಿ (ವರ್ಷಕ್ಕೊಮ್ಮೆ ಚಕ್ರ ಬಡ್ಡಿಯನ್ನು ಲೆಕ್ಕ ಹಾಕುವಂತೆ) ಹೂಡಿಕೆ ಮಾಡಲಾಯಿತು. ಒಂದುವೇಳೆ ನಿರ್ದಿಷ್ಟವಾಗಿ ಎರಡನೇ ವರ್ಷದಲ್ಲಿ ಗಳಿಸಿದ ಚಕ್ರ ಬಡ್ಡಿಯು ₹1,368 ಆಗಿದ್ದರೆ, ಹೂಡಿಕೆ ಮಾಡಿದ ಮೂಲ ಮೊತ್ತವನ್ನು ಕಂಡುಹಿಡಿಯಿರಿ.

Ans
✓ 1. ₹5,700
✗ 2. ₹5,865
✗ 3. ₹6,670
✗ 4. ₹4,825

Q.75 ಒಂದುವೇಳೆ 8 ಸಂಖ್ಯೆಗಳ ಮೊತ್ತವು 72 ಆಗಿದ್ದರೆ, ಅವುಗಳ ಸರಾಸರಿ ಎಷ್ಟು?

Ans
✓ 1. 9
✗ 2. 10
✗ 3. 8
✗ 4. 12

Q.76 ಈ ಪ್ರಶ್ನೆಯು ಈ ಕೆಳಗಿನ ಪದಗಳನ್ನು ಆಧರಿಸಿದೆ:

(ಎಡ) HIP MIX UGH SET (ಬಲ)

ಬಲದಿಂದ ಮೊದಲನೇ ಪದದ ಎರಡನೇ ಅಕ್ಷರ ಮತ್ತು ಎಡದಿಂದ ಮೊದಲನೇ ಪದದ ಎರಡನೇ ಅಕ್ಷರದ ನಡುವೆ ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans
✓ 1. 3
✗ 2. 4
✗ 3. 6
✗ 4. 2

Q.77 ಒಂದು ಧಾರಕವನ್ನು ಎಲಿವೇಟರ್ ಮೂಲಕ ಲಂಬವಾಗಿ ಮೇಲಿನ ಮಹಡಿಗೆ ಮೇಲಕ್ಕೆತ್ತಲಾಗುತ್ತದೆ. ಅದರ ಗುರುತ್ವಾಕರ್ಷಣೆಯ ಪ್ರಚ್ಛನ್ನ ಶಕ್ತಿಯಲ್ಲಿ ಆಗುವ ಬದಲಾವಣೆಯನ್ನು ಯಾವ ಹೇಳಿಕೆಯು ಸರಿಯಾಗಿ ವಿವರಿಸುತ್ತದೆ?

Ans
✗ 1. ಇಡೀ ಆರೋಹಣದ ಉದ್ದಕ್ಕೂ ಎಲಿವೇಟರ್ ವೇಗೋತ್ಕರ್ಷಗೊಂಡಾಗ ಮಾತ್ರ ಪ್ರಚ್ಛನ್ನ ಶಕ್ತಿಯು ಹೆಚ್ಚಾಗುತ್ತದೆ
✓ 2. ಪ್ರಚ್ಛನ್ನ ಶಕ್ತಿಯು mgh ನಷ್ಟು ಹೆಚ್ಚಾಗುತ್ತದೆ, ಇಲ್ಲಿ m ದ್ರವ್ಯರಾಶಿ, g ಗುರುತ್ವಾಕರ್ಷಣೆಯಿಂದ ಉಂಟಾಗುವ ವೇಗವರ್ಧನೆ ಮತ್ತು h ಎಂಬುದು ಪಡೆದ ಲಂಬ ಎತ್ತರವಾಗಿದೆ.
✗ 3. ಮಹಡಿಗಳ ನಡುವೆ ಎಲಿವೇಟರ್ ಎಷ್ಟು ವೇಗವಾಗಿ ಚಲಿಸುತ್ತದೆ ಎಂಬುದರ ಮೇಲೆ ಪ್ರಚ್ಛನ್ನ ಶಕ್ತಿಯು ಅವಲಂಬಿತವಾಗಿರುತ್ತದೆ.
✗ 4. ಧಾರಕವು ಮೇಲಿನ ಮಹಡಿಯಲ್ಲಿ ನಿಲ್ಲುವುದರಿಂದ ಪ್ರಚ್ಛನ್ನ ಶಕ್ತಿಯು ಬದಲಾಗದೆ ಉಳಿಯುತ್ತದೆ.

Q.78 ಒಂದು ನಿರ್ದಿಷ್ಟ ಸಂಕೇತದಲ್ಲಿ,
'pen book diary' ಎಂಬುದನ್ನು 'qt bx lm' ಎಂದು ಸಂಕೇತಿಸಲಾಗಿದೆ,
'diary scale eraser' ಎಂಬುದನ್ನು 'np rw bx' ಎಂದು ಸಂಕೇತಿಸಲಾಗಿದೆ ಮತ್ತು
'eraser pen marker' ಎಂಬುದನ್ನು 'gv lm np' ಎಂದು ಸಂಕೇತಿಸಲಾಗಿದೆ.
(ಎಲ್ಲ ಸಂಕೇತಗಳು ಕೇವಲ ಎರಡಕ್ಷರದ ಸಂಕೇತಗಳಾಗಿವೆ.)
ಹಾಗಾದರೆ marker ನ ಸಂಕೇತವೇನು?

Ans
✗ 1. lm
✓ 2. gv
✗ 3. np
✗ 4. rw

Q.79 AB ಯು CD ಗೆ ಸಮಾನಾಂತರವಾಗಿದೆ. PQ ಎಂಬ ಛೇದಕರೇಖೆಯು AB ಮತ್ತು CD ಗಳನ್ನು ಕ್ರಮವಾಗಿ E ಮತ್ತು F ನಲ್ಲಿ ಛೇದಿಸುತ್ತದೆ ಮತ್ತು ∠PEB = 47° ಆಗಿರುತ್ತದೆ. ∠BEG = 22° ಮತ್ತು ∠GFE = 21° ಆಗುವಂತೆ G ಎಂಬುದು AB ಮತ್ತು CD ನಡುವಿನ ಬಿಂದುವಾಗಿದೆ. ಹಾಗಾದರೆ, ∠EGF ನ ಅಳತೆ ಏನು?

Ans
✓ 1. 48°
✗ 2. 52°
✗ 3. 57°
✗ 4. 39°

Q.80 ಒಂದು ವಿಶಿಷ್ಟ ಸಂಕೇತ ಭಾಷೆಯಲ್ಲಿ,
'A ^ B' ಎಂದರೆ 'A ಅವರು B ಅವರ ತಂದೆ',
'A ≠ B' ಎಂದರೆ 'A ಅವರು B ಯ ಮಗ',
'A ≥ B' ಎಂದರೆ 'A ಅವರು B ಯ ಹೆಂಡತಿ'ಮತ್ತು
'A @ B 'ಎಂದರೆ 'A ಅವರು B ನ ಸಹೋದರ'.
ಮೇಲಿನದನ್ನು ಆಧರಿಸಿ, ಒಂದು ವೇಳೆ 'P @ Q ≠ V ^ W ≥ X' ಆಗಿದ್ದರೆ, P ಅವರು X ಗೆ ಹೇಗೆ ಸಂಬಂಧಿ?

Ans
✗ 1. ಗಂಡ
✗ 2. ಸಹೋದರ
✗ 3. ಮಗಳ ಗಂಡ
✓ 4. ಹೆಂಡತಿಯ ಸಹೋದರ

Q.81 ಕೌಶಲ್ ಅವರು 6 ಗಂಟೆ 45 ನಿಮಿಷಗಳ ಕಾಲ 32 km/h ವೇಗದಲ್ಲಿ ಪ್ರಯಾಣಿಸಿದರು. ಅದೇ ದೂರವನ್ನು 3 ಗಂಟೆಗಳಲ್ಲಿ ಕ್ರಮಿಸಲು ಅವರು ಯಾವ ವೇಗದಲ್ಲಿ (km/h ಗಳಲ್ಲಿ) ಪ್ರಯಾಣಿಸಬೇಕು?

Ans
✗ 1. 74
✗ 2. 70
✓ 3. 72
✗ 4. 68

Q.82 ತ್ರಿಕೋನಮಿತಿ ಸೂತ್ರವನ್ನು ಬಳಸಿ ಈ ಕೆಳಗಿನ ನಿರೂಪಣೆಯನ್ನು (Expression) ಸರಳರೂಪಕ್ಕೆ ತನ್ನಿ.

$$\sin^2(\theta) + 2\sin(\theta)\cos(\theta) + \cos^2(\theta)$$

Ans
✓ 1. 1 + sin(2θ)
✗ 2. 2sin(θ)
✗ 3. 1 + cos(2θ)
✗ 4. $\sin^2(\theta)$

Q.83 500 kg ರಾಕೆಟ್ ಎಂಜಿನ್ ಒಂದು 10 s ಗೆ 10,000 N ಸ್ಥಿರ ನೋದನ ಬಲವನ್ನು ಒದಗಿಸಿ ಹಾರಿಸುತ್ತದೆ. ಒಂದು ವೇಳೆ ಆರಂಭಿಕ ವೇಗವು 100 m s^{-1} ಆಗಿದ್ದರೆ, ಅದು ತಲುಪುವ ಅಂತಿಮ ವೇಗ ಎಷ್ಟು? (ಗುರುತ್ವಾಕರ್ಷಣೆ ಮತ್ತು ಗಾಳಿಯ ಪ್ರತಿರೋಧವನ್ನು ನಿರ್ಲಕ್ಷಿಸಿ).

Ans
✗ 1. 250 m/s
✓ 2. 300 m/s
✗ 3. 200 m/s
✗ 4. 150 m/s

blackbook

Q.84 ಜಲಸಸ್ಯಗಳ ವಿಪರೀತ ಬೆಳೆವಣಿಗೆಗೆ ಉತ್ತೇಜನ ನೀಡುವ ಅತಿಯಾದ ನೈಟ್ರೇಟ್‌ಗಳು ಮತ್ತು ಫಾಸ್ಫೇಟ್‌ಗಳಿಂದ ಯಾವ ವಿಧದ ಜಲಮಾಲಿನ್ಯ ಉಂಟಾಗುತ್ತದೆ?

Ans
- ✔ 1. ಯೂಟ್ರೋಫಿಕೇಶನ್
- ✘ 2. ಸೆಡಿಮೆಂಟೇಶನ್
- ✘ 3. ಆಮ್ಲೀಕರಣ (Acidification)
- ✘ 4. ಜೈವಿಕ ಶೇಖರಣೆ (Bioaccumulation)

Q.85 WTO ಕೃಷಿ ಒಪ್ಪಂದವು (AoA) ಮುಖ್ಯವಾಗಿ ಯಾವ ವರ್ಗದ ದೇಶೀಯ ಸಬ್ಸಿಡಿಯ ಮೇಲೆ ನಿರ್ಬಂಧ ಹೇರುವ ಮೂಲಕ ಭಾರತೀಯ ಆಹಾರ ಭದ್ರತೆಗೆ ಸವಾಲನ್ನು ಒಡ್ಡಿತು?

Ans
- ✘ 1. ಬ್ಲೂ ಬಾಕ್ಸ್ ಪಾವತಿಗಳು
- ✔ 2. ಅಂಬರ್ ಬಾಕ್ಸ್ ಬೆಂಬಲ
- ✘ 3. ಗ್ರೀನ್ ಬಾಕ್ಸ್ ಸಬ್ಸಿಡಿಗಳು
- ✘ 4. ಯೆಲ್ಲೊ ಬಾಕ್ಸ್ ನೆರವು

Q.86 ಒಂದು ರಸಪ್ರಶ್ನೆ ಲೆಕ್ಕಪರಿಶೋಧನೆಯಲ್ಲಿ, ವಿದ್ಯಾರ್ಥಿಯ ನಿಖರತೆಯನ್ನು $E = \frac{\text{correct}}{\text{attempted}}$ ಎಂದು ವ್ಯಾಖ್ಯಾನಿಸಲಾಗಿದೆ. ಭಿನ್ನರಾಶಿ E ಯು ಅತ್ಯಂತ ಸರಳ ರೂಪದಲ್ಲಿದೆ, ಮತ್ತು ಅದರ ಛೇದವು ಅಂಶಕ್ಕಿಂತ 2 ಹೆಚ್ಚು ಇದೆ. ಡ್ಯಾಶ್ ಬೋರ್ಡ್ ಮೇಲೆ, ವ್ಯುತ್ಕ್ರಮ ಮಾಪನವನ್ನು $R = \frac{\text{attempted}}{\text{correct}}$ ಎಂದು ತೋರಿಸಲಾಗಿದೆ. ತಿದ್ದುಪಡಿಯ ಸಂದರ್ಭದಲ್ಲಿ, R ನ ಅಂಶದಿಂದ 3 ಅಮಾನ್ಯ ಪ್ರಯತ್ನಗಳನ್ನು ತೆಗೆದುಹಾಕಲಾಗಿದೆ (ಆದರೆ ಅದರ ಛೇದವು ಬದಲಾಗದೆ ಹಾಗೆಯೇ ಉಳಿದಿರುತ್ತದೆ). ಹೊಂದಾಣಿಕೆ ಮಾಡಿದ ವ್ಯುತ್ಕ್ರಮದಿಂದ E ಅನ್ನು ಕಳೆದಾಗ ಅದು $\frac{1}{15}$ ಗೆ ಸಮ ಆಗಿರುವುದು ಕಂಡುಬಂತು. ಹಾಗಾದರೆ E ಯ ಸಂಭವನೀಯ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✘ 1. 0.57
- ✘ 2. 0.83
- ✘ 3. 0.67
- ✔ 4. 0.6

Q.87 ₹26,600 ಅನ್ನು ಮೂರು ಭಾಗಗಳಾಗಿ ವಿಂಗಡಿಸಬೇಕಿದ್ದು, ಮೊದಲ ಭಾಗದ ಅರ್ಧದಷ್ಟು, ಎರಡನೇ ಭಾಗದ ನಾಲ್ಕನೇ ಒಂದರಷ್ಟು ಮತ್ತು ಮೂರನೇ ಭಾಗದ ಎಂಟನೇ ಒಂದರಷ್ಟು ಸಮಾನವಾಗಿರಬೇಕು. ಹಾಗಾದರೆ, ಮೊದಲ ಭಾಗವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans
- ✔ 1. 3,800
- ✘ 2. 3,900
- ✘ 3. 3,600
- ✘ 4. 3,700

Q.88 ಈ ಕೆಳಗಿನ ಯಾವುದು ಸಂಯುಕ್ತದ ದ್ವಿಪರಮಾಣತ್ವಕ ಅಣು (diatomic molecule) ಆಗಿದೆ?

Ans
- ✘ 1. Cl_2
- ✔ 2. HCl
- ✘ 3. O_2
- ✘ 4. H_2

Q.89 ಭಾರತದ ರಾಷ್ಟ್ರಪತಿಯವರು ಸಚಿವ ಸಂಪುಟದ ಸಲಹೆಯ ಮೇರೆಗೆ ಮಾತ್ರ ಕಾರ್ಯನಿರ್ವಹಿಸುವುದನ್ನು ಯಾವ ಸಾಂವಿಧಾನಿಕ ತಿದ್ದುಪಡಿಯು ಕಡ್ಡಾಯಗೊಳಿಸಿತು??

Ans
- ✘ 1. 24ನೇ ತಿದ್ದುಪಡಿ
- ✘ 2. 49ನೇ ತಿದ್ದುಪಡಿ
- ✔ 3. 42ನೇ ತಿದ್ದುಪಡಿ
- ✘ 4. 52ನೇ ತಿದ್ದುಪಡಿ

Black book

Q.90 CARRYABLE ಎಂಬ ಪದದಲ್ಲಿನ ಪ್ರತಿಯೊಂದು ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅದರ ಮುಂದಿನ ಎರಡನೇ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿಯೊಂದು ವ್ಯಂಜನಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅದರ ಹಿಂದಿನ ಎರಡನೇ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಅಕ್ಷರಗಳ ಗುಂಪಿನಲ್ಲಿ ಈ ಕೆಳಗಿನ ಯಾವ ಅಕ್ಷರವು ನಿಖರವಾಗಿ ಎರಡು ಬಾರಿ ಕಾಣಿಸಿಕೊಳ್ಳುತ್ತದೆ?

Ans
- ✗ 1. Z
- ✓ 2. P
- ✗ 3. W
- ✗ 4. G

Q.91 $(81)^{\frac{3}{4}}$ ರ ಮೌಲ್ಯವೆಷ್ಟು?

Ans
- ✓ 1. 27
- ✗ 2. 81
- ✗ 3. 9
- ✗ 4. 3

Q.92 15326748 ಎಂಬ ಸಂಖ್ಯೆಯಲ್ಲಿರುವ ಪ್ರತಿಯೊಂದು ಅಂಕಿಗಳನ್ನು ಎಡದಿಂದ ಬಲಕ್ಕೆ ಏರಿಕೆ ಕ್ರಮದಲ್ಲಿ ಜೋಡಿಸಲಾಗಿದೆ. ಮೂಲ ಸಂಖ್ಯೆಗೆ ಹೋಲಿಸಿದರೆ ಎಷ್ಟು ಅಂಕಿ(ಗಳ) ಸ್ಥಾನವು ಬದಲಾಗದೆ ಉಳಿಯುತ್ತದೆ(ವೆ)?

Ans
- ✗ 1. ಒಂದು
- ✓ 2. ಮೂರು
- ✗ 3. ಯಾವುದೂ ಇಲ್ಲ
- ✗ 4. ಎರಡು

Q.93 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿದ ಒಂದು ನಿರ್ದಿಷ್ಟ ರೀತಿಯಲ್ಲಿ JMRB ಎಂಬುದು FINX ಎಂಬುದಕ್ಕೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, NYQT ಎಂಬುದು JUMP ಎಂಬುದಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, KSCL ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

Ans
- ✗ 1. IQAK
- ✗ 2. FNXG
- ✓ 3. GOYH
- ✗ 4. HPZI

Q.94 ಕೆಳಗೆ ಕೊಟ್ಟಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?

193 180 167 154 141 128 ?

Ans
- ✗ 1. 118
- ✓ 2. 115
- ✗ 3. 113
- ✗ 4. 111

Q.95 x, y ಮತ್ತು z ಗಳ ಈ ಕೆಳಗಿನ ರೇಖೀಯ ಸಮೀಕರಣಗಳ ವಿಧಾನವನ್ನು ಬಿಡಿಸಿ:

x − 2y + 3z = 49; x − 6y − 4z = 8; 2x − 3y − z = 12.

Ans
- ✗ 1. (x, y, z) = (−10, 5, 7)
- ✓ 2. (x, y, z) = (10, 5, −7)
- ✗ 3. (x, y, z) = (10, 5, 7)
- ✗ 4. (x, y, z) = (10, −5, −7)

adda247

Q.96 ಭಾರತ ಸರ್ಕಾರವು, ಆಯ್ದ ನಗರಗಳು ಮತ್ತು ಪಟ್ಟಣಗಳಲ್ಲಿ ಮೂಲಭೂತ ಮೂಲಸೌಕರ್ಯಗಳ ಅಭಿವೃದ್ಧಿಯ ಮೇಲೆ ಗಮನಹರಿಸಲು ಅಟಲ್ ಪುನರುಜ್ಜೀವನ ಮತ್ತು ನಗರ ಪರಿವರ್ತನೆ ಮಿಷನ್ (AMRUT) ಅನ್ನು ಯಾವ ವರ್ಷದಲ್ಲಿ ಪ್ರಾರಂಭಿಸಿತು?

Ans
✗ 1. 2024
✓ 2. 2015
✗ 3. 2018
✗ 4. 2021

Q.97 G ಅವರು O ಅವರ ತಂದೆ. O ಅವರು T ಅವರ ಸಹೋದರ. R ಅವರು S ಅವರ ತಂದೆ. S ಅವರು T ಅವರ ಮಗ. ಹಾಗಾದರೆ G ಅವರು S ಅವರಿಗೆ ಹೇಗೆ ಸಂಬಂಧಿ?

Ans
✗ 1. ತಂದೆ
✓ 2. ತಾಯಿಯ ತಂದೆ
✗ 3. ಮಗ
✗ 4. ತಾಯಿಯ ಸಹೋದರ

Q.98 ಒಂದು ವೃತ್ತವು 13 cm ತ್ರಿಜ್ಯವನ್ನು ಹೊಂದಿದೆ ಹಾಗೂ ಅದರ ಒಂದು ಜ್ಯಾದ ಉದ್ದವು 22 cm ಆಗಿದೆ. ಹಾಗಾದರೆ ಮಧ್ಯಬಿಂದುವಿನಿಂದ ಜ್ಯಾ ವರೆಗೆ ಇರುವ ದೂರವನ್ನು ಕಂಡುಹಿಡಿಯಿರಿ. ($\sqrt{3} = 1.7$ ಬಳಸಿ)

Ans
✗ 1. 7.2 cm
✓ 2. 6.8 cm
✗ 3. 5.4 cm
✗ 4. 8.7 cm

Q.99 "ಸ್ವದೇಶಿ" ಚಳುವಳಿಯ ಆರಂಭಿಕ ಹಂತದಲ್ಲಿ (1905 ರ ಪೂರ್ವ) ಅದರ ಪ್ರಮುಖ ಕಲ್ಪನೆ ಏನಾಗಿತ್ತು?

Ans
✗ 1.
ಎಲ್ಲಾ ಬ್ರಿಟಿಷ್ ಸರಕುಗಳ ಬಹಿಷ್ಕಾರ
✗ 2.
ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಬೇಡಿಕೆ
✓ 3. ಸ್ವದೇಶಿಯ ಕೈಗಾರಿಕೆಗಳ ರಕ್ಷಣೆ
✗ 4.
ಧಾರ್ಮಿಕ ಪುನರುಜ್ಜೀವನ

Q.100 ಹೊಸ ಪರಿವರ್ತನೆಯು (mutation) ಸಸ್ಯ ಕೋಶವು ಎಲ್ಲಾ ಕ್ರಿಯಾತ್ಮಕ ಪ್ಲಾಸ್ಟಿಡ್‌ಗಳನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಇದರಿಂದ ಜೀವಕೋಶಕ್ಕೆ ಉಂಟಾಗುವ ಬಹುತೇಕ ಪರಿಣಾಮವೇನು?

Ans
✗ 1. ಜೀವಕೋಶವು ವಿಭಜನೆಯನ್ನು ನಿಯಂತ್ರಿಸಲು ಸಾಧ್ಯವಾಗುವುದಿಲ್ಲ
✗ 2. ಜೀವಕೋಶವು ನೀರಿನ ನಷ್ಟವನ್ನು ನಿಯಂತ್ರಿಸಲು ಆಗುವುದಿಲ್ಲ
✗ 3. ಜೀವಕೋಶವು ಪ್ರೋಟೀನ್‌ಗಳನ್ನು ಸಂಶ್ಲೇಷಿಸಲು ಸಾಧ್ಯವಾಗುವುದಿಲ್ಲ
✓ 4. ಜೀವಕೋಶವು ಆಹಾರ ಸಂಶ್ಲೇಷಣೆಯನ್ನು ಮಾಡಲಾಗುವುದಿಲ್ಲ

"

Black book